# ತಪೋವಾಣಿ

ಸಂ. 7 ಸಂ. 12 ಡಿಸೆಂಬರ್ 2010 ರೂ.15


## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

**(ಅನು: ಶ್ಯಾಮಲಾದೇವಿ)**

ನನಗೆ, ಚಿಲಿ ದೇಶದ ಗಣಿ ಕೆಲಸಗಾರರ ರಕ್ಷಣೆ ಮತ್ತು ಆಂಗ್ ಸಾನ್ ಸೂ ಚಿ ಅವರ ಬಿಡುಗಡೆ, ಈ ವರ್ಷದ ಮಹತ್ವದ ಸುದ್ದಿಗಳು. ನನಗೆ, ಅದು ಮಾನವ ಮನೋಧರ್ಮದ ಗೆಲುವು. ಭರವಸೆಯ ಗೆಲುವು. ಜೀವನ ನಿರಂತರವಾಗಿ ಮುಂದುವರಿಯುತ್ತದೆ. ನಾವು ನೋವನ್ನು ಸಹಿಸಿಕೊಳ್ಳಬೇಕು, ಕಷ್ಟಗಳನ್ನು ಎದುರಿಸಬೇಕು ಮತ್ತು ಜೀವನ ಬೆಳಗಲು ಕಾಯಬೇಕು. ಅದಕ್ಕೆ ಅಗಾಧವಾದ ಧೈರ್ಯ ಬೇಕು ಮತ್ತು ನಮ್ಮ ನಿಶ್ಚಿತಾಭಿಪ್ರಾಯಗಳಲ್ಲಿ ನಂಬಿಕೆ ಬೇಕು.

ಸೂ ಚಿ ಅವರ ಬಿಡುಗಡೆ ಅಂತಿಮವಲ್ಲ. ಅದು ಒಂದು ಪ್ರಾರಂಭ ಮಾತ್ರ. ಆಕೆಯನ್ನು ಗೃಹಬಂಧನದಲ್ಲಿ ಇಟ್ಟಿದ್ದ ಶಕ್ತಿಗಳು ಇನ್ನೂ ಬಲವಾಗಿವೆ ಮತ್ತು ಆಕೆಯ ಚಟುವಟಿಕೆಗಳನ್ನು ಯಾವ ಸಮಯದಲ್ಲಾದರೂ ನಿಲ್ಲಿಸಬಹುದು. ಆ ಕ್ರೂರ ಸರ್ಕಾರ ಆಕೆಯನ್ನು ಬಿಡುಗಡೆಮಾಡಿದ್ದು ಪ್ರೀತಿಗಾಗಿ ಅಲ್ಲ, ಆದರೆ, ಬಹುಶಃ, ವಿಧಿಸಿರುವ ಪ್ರತಿಬಂಧಕಗಳನ್ನು ತೆರವುಗೊಳಿಸಿಕೊಳ್ಳುವುದಕ್ಕಾಗಿ. ಇಂಥ ಆಳ್ವಿಕೆಗಳು ಮತ್ತು ವ್ಯವಸ್ಥೆಗಳು ಇರುವವರೆಗೆ, ಸೂ ಚೀಯಂಥವರು ಈ ಪ್ರಪಂಚದಲ್ಲಿ ಸುರಕ್ಷಿತವಾಗಿರುವುದಿಲ್ಲ. ಸ್ವಾತಂತ್ರ್ಯ ಮತ್ತು ಮಾನವ ಘನತೆಗಳು ಸುರಕ್ಷಿತವಾಗಿರುವುದಿಲ್ಲ. ಇಂಥ ವ್ಯವಸ್ಥೆಗಳು ಕುಸಿಯಬೇಕು. ಮತ್ತು ನಾವು ಸಧ್ಯದಲ್ಲೇ ಬೆಳಕಿನ ಯುಗವನ್ನು, ಸತ್ಯಯುಗವನ್ನು ಪ್ರವೇಶಿಸುತ್ತಿರುವಂತೆಯೇ ಅವು ಕುಸಿಯುತ್ತವೆ.

ಇಡೀ ಪ್ರಪಂಚ ಬೆಳಕಿನ ಯುಗಕ್ಕಾಗಿ ಕಾಯುತ್ತಿದೆ.

ಪ್ರಾಥಮಿಕ ಶಾಲೆಗಳಲ್ಲಿ ಓದುತ್ತಿರುವ ಮೊಮ್ಮಕ್ಕಳ ಆಗ್ರಹದ ಮೇರೆಗೆ ಅಜ್ಜಿತಾತಂದಿರು ಧ್ಯಾನಾಭ್ಯಾಸವನ್ನು ತೆಗೆದುಕೊಳ್ಳುವುದನ್ನು ನಾನು ನೋಡುತ್ತಿದ್ದೇನೆ. ಮಕ್ಕಳು ಹಿರಿಯರಿಗೆ ದಾರಿ ತೋರಿಸುತ್ತಿದ್ದಾರೆ!

ನಾನು ಇನ್ನೂ ಚಿಕ್ಕ ವಿದ್ಯಾರ್ಥಿಯಾಗಿದ್ದಾಗ, ನನ್ನ ಟೀಚರ್ 'ಮಗು ಮಾನವನ ತಂದೆ' ಎಂಬ ವಿಷಯದ ಬಗ್ಗೆ ಪ್ರಬಂಧ ಬರೆಯವಂತೆ ನನಗೆ ಹೇಳಿದರು. ನನಗೆ ವಿಷಯ ಅರ್ಥವಾಗಲಿಲ್ಲ. ಮಗು ಮಾನವನ ತಂದೆ ಆಗುವುದಾದರೂ ಹೇಗೆ! ಈಗ, ನನಗೆ ಅರ್ಥವಾಗಿದೆ. ಮಕ್ಕಳು ಅವರ ಅಜ್ಜಿತಾತಂದಿರ ತಾಯಿತಂದೆಯರು!

ಈ ಮಕ್ಕಳು, ಯುಗಗಳಿಂದ ಬೆಳಕನ್ನು ಚಾನಲ್ ಮಾಡುತ್ತಿರುವರೇನೋ ಎಂಬಂತೆ, ಬಹಳ ಪರಿಣಾಮಕಾರಿಯಾಗಿ ಬೆಳಕನ್ನು ಚಾನಲ್ ಮಾಡುತ್ತಿದ್ದಾರೆ. ಅವರು ಬೆಳಕಿಗೆ ಹತ್ತಿರವಾಗಿದ್ದಾರೆ. ಅವರು ಭವಿಷ್ಯದ ಮಕ್ಕಳು.

ಈ ವರ್ಷ ನಮ್ಮಲ್ಲಿ ನಿಜವಾದ ಮುಖಂಡರನ್ನು ಹೊರತಂದಿತು. ಯಾವುದೇ ನೇರ ಸೂಚನೆಗಳಿಲ್ಲದೆ ಅಥವಾ ನನ್ನ ಆದೇಶವಿಲ್ಲದೆ, ಈ ಬೆಳಕಿನ ಮುಖಂಡರು ತಾವಾಗಿಯೇ ಅತ್ಯಂತ ಸಮರ್ಪಕವಾಗಿ ಸಿದ್ಧತೆಮಾಡಿಕೊಂಡು, ಆರು ಲಕ್ಷಕ್ಕೂ ಹೆಚ್ಚು ಮಕ್ಕಳು ಬೆಳಕನ್ನು ಚಾನಲ್ ಮಾಡಲು ಸಹಾಯಮಾಡಿದ್ದಾರೆ. ಅವರು ತಮ್ಮ ಹಣ, ತಮ್ಮ ಚೈತನ್ಯ ಮತ್ತು ತಮ್ಮ ಸಮಯವನ್ನು ವ್ಯಯಿಸಿ, ಬೇರೆಬೇರೆ ಊರುಗಳು ಮತ್ತು ಪಟ್ಟಣಗಳಿಗೆ ಪ್ರಯಾಣಿಸುತ್ತಿದ್ದಾರೆ ಮತ್ತು ನಿಜವಾದ ಋಷಿಗಳ ರೀತಿಯಲ್ಲಿ ಯಾವುದೇ ನಿರೀಕ್ಷೆಯಿಲ್ಲದೆ ಕೆಲಸಮಾಡುತ್ತಿದ್ದಾರೆ.

ಇದೇರೀತಿ ಮೌನವಾಗಿ, ಅವರು ಒಂದು ಹೀಲರ್ಸ್ ತಂಡವನ್ನು ಕೂಡ ರಚಿಸಿಕೊಂಡಿದ್ದಾರೆ. ಪ್ರತಿ ರಾತ್ರಿ 10 ಘಂಟೆಗೆ ಅವರು, ಶರೀರ ಮತ್ತು ಮನಸ್ಸುಗಳ ಹೀಲಿಂಗ್‌ಗಾಗಿ ಬೇಡಿಕೆ ಸಲ್ಲಿಸುವವರಿಗೆ, ಹೀಲಿಂಗ್ ಚೈತನ್ಯಗಳನ್ನು ಕಳುಹಿಸುತ್ತಿದ್ದಾರೆ. ಜನ ಕೋಮಾದಿಂದ ಹೊರಬಂದಾಗ, ತೀವ್ರಚಿಕಿತ್ಸಾಘಟಕಗಳಿಂದ ಪುಟಿದೆದ್ದಾಗ, ತೀವ್ರವಾದ ನೋವು ಮತ್ತು ಕಾಯಿಲೆಗಳ ನಂತರ ಮುಕ್ತರಾಗಿ ಪುನಃ ಮುಗುಳ್ನಗೆ ಬೀರಿದಾಗ, ಪವಾಡಗಳು ಮೌನವಾಗಿ ಜರುಗುತ್ತಿವೆ. ಈ ಕೆಲಸ ಮೌನವಾಗಿ ಆಗುತ್ತಿದೆ. ಯಾವುದೇ ನಿರೀಕ್ಷೆ ಇಲ್ಲದೆ.

ಒಂದು ಬೆಳಕಿನ ಕಾರ್ಯಕರ್ತರ ಸೈನ್ಯ ಮತ್ತು ಋಷಿಗಳಾಗಿ ರೂಪುಗೊಳ್ಳುತ್ತಿರುವ ಒಂದು ತಂಡ ಮೌನವಾಗಿ ಬೆಳೆಯುತ್ತಿದೆ. ಈಗ ನಾನು ಅತ್ಯಂತ ಭರವಸೆಯಿಂದ, 2012ಕ್ಕೆ ಸಂಬಂಧಪಟ್ಟ ವಿನಾಶ ಮತ್ತು ಸಂಕಷ್ಟಗಳನ್ನು ನಾವು ತಡೆಗಟ್ಟಬಲ್ಲೆವು ಎಂದು ಹೇಳಬಲ್ಲೆ.

ಈ ರೀತಿ ಅನೇಕ ತಂಡಗಳು ತಮ್ಮದೇ ಆದ ರೀತಿಗಳಲ್ಲಿ ಪ್ರಪಂಚಾದ್ಯಂತ ಕೆಲಸಮಾಡುತ್ತಿವೆ. ನಾನು ನನ್ನ ಶಾಖೆಗಳು ಮತ್ತು ಕೇಂದ್ರಗಳನ್ನು ಪ್ರಪಂಚದ ಇತರ ಭಾಗಗಳಲ್ಲಿ ತೆರೆಯಬೇಕಾಗಿಲ್ಲ. ಬೆಳಕಿನ ಕೇಂದ್ರಗಳು, ಬೇರೆಬೇರೆ ಹೆಸರುಗಳು ಮತ್ತು ನಿಶಾನೆಗಳ ಅಡಿಯಲ್ಲಿಯಾದರೂ, ಈಗಾಗಲೇ ಕೆಲಸಮಾಡುತ್ತಿವೆ. ಅವು ನಮ್ಮ ಕೆಲಸ ಮಾಡುತ್ತಿವೆ. ಅದು ಬೆಳಕಿನ ಕೆಲಸ. ■

**ಜ್ಯೋತಿಕಾರ್ಯದ ವಾರ್ತಾಪತ್ರ**



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದ್ದಾರೆ.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.


**ಮಾನಸ ಫೌಂಡೇಶನ್ (ರಿ)**

ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077. ಭಾರತ.

✆ (080) 2846 5280, 2271 5501, 93420 30250 (ಬೆಳಗ್ಗೆ 10ರಿಂದ ಮಧ್ಯಾಹ್ನ 1)

ಇ-ಮೇಲ್: info@lightagemasters.com ವೆಬ್-ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್‌ನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ)**
**ಪ್ರಕಾಶ್‌ಮಾರ್ಗ್ (ಮರಾಠಿ)**
**ವಾರ್ತಾಪತ್ರದ ವಾರ್ಷಿಕ ಚಂದಾ ರೂ.200/-**
**ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



**ಗುರೂಜಿಯವರೊಂದಿಗೆ ಆಧ್ಯಾತ್ಮಿಕ ವಿಷಯಗಳನ್ನು ಚರ್ಚಿಸುವುದಕ್ಕಾಗಿ ಬ್ರಹ್ಮರ್ಷಿ ಪತ್ರೀಜಿಯವರು ನವಂಬರ್ 1, 2010ರಂದು ತಪೋನಗರಕ್ಕೆ ಭೇಟಿ ನೀಡಿದರು.**

### ಸುದ್ದಿ-ಸೂಚನೆ

- 2-11-2010ರಂದು ಗುರೂಜಿಯವರು ಬೆಂಗಳೂರಿನ ಪಿರಮಿಡ್ ವ್ಯಾಲಿಯಲ್ಲಿ 'ರಾಷ್ಟ್ರೀಯ ಆಧ್ಯಾತ್ಮಿಕ ಯುವ ಸಮ್ಮೇಳನ'ವನ್ನು ಉದ್ದೇಶಿಸಿ ಮಾತನಾಡಿದರು.
- 7-11-2010ರಂದು ಲೈಟ್ ಚಾನಲ್ ವಿಶ್ವಸಂಚಲನದ ವಾಲಂಟಿಯರ್‌ಗಳು ತಮ್ಮ ಮುಂದಿನ ಗುರಿಗಳನ್ನು ಸಾಧಿಸಲು, ಒಂದು ವ್ಯವಸ್ಥಿತ ಹಾಗೂ ಕೇಂದ್ರೀಕೃತ ವಾದ ಮಾರ್ಗವನ್ನು ಹೊಂದಿರಬೇಕೆಂಬುದರ ಬಗ್ಗೆ ಗುರೂಜಿಯವರು ಪ್ರೋತ್ಸಾಹಿಸಿ ಮಾರ್ಗದರ್ಶಿಸಿದರು.
- 'Higher Communication and Other Realities' ಪುಸ್ತಕದ ಕನ್ನಡ ಅನುವಾದ ಈಗ ಲಭ್ಯವಿದೆ.
- ಶಂಬಲ ಗ್ರೂಪ್ ಹೊಸದಾಗಿ ಸೇರಲು ಬಯಸುವ ಸಾಧಕರು ತಮ್ಮ ಹೆಸರನ್ನು 30-12-2010 ರೊಳಗೆ ರಿಜಿಸ್ಟರ್ ಮಾಡಬೇಕು. ದೂರ ಕಲಿಕೆಯ ಸಾಧಕರು ಕೂಡ ಸೇರಬಹುದು. ವಿವರಗಳಿಗೆ ನಮ್ಮ ಆಫೀಸನ್ನು ಸಂಪರ್ಕಿಸಿ.
- 26-12-2010ರಂದು ನಡೆಯುವ ಅಖಂಡ ಧ್ಯಾನದಲ್ಲಿ ಭಾಗವಹಿಸಲು ಇಚ್ಛಿಸುವವರು, ಭಾಗವಹಿಸುವ ಸಮಯದೊಂದಿಗೆ 20-12-2010ರ ಒಳಗೆ ನಮ್ಮ ಆಫೀಸಿನಲ್ಲಿ ರಿಜಿಸ್ಟರ್ ಮಾಡಬೇಕು.
- "ತಪೋವಾಣಿ"ಯನ್ನು ಕಾಂಪ್ಲಿಮೆಂಟರಿಯಾಗಿ ಪಡೆಯುತ್ತಿರುವವರು ಮುಂದೆಯೂ ಪಡೆಯುವ ಆಸಕ್ತಿಯಿದ್ದಲ್ಲಿ ನಮಗೆ ತಿಳಿಸಬೇಕು.

### ಈ ತಿಂಗಳು ತಪೋನಗರದಲ್ಲಿ

| | |
|---|---|
| 21-12-10 | ಚಂದ್ರಗ್ರಹಣ ವಿಶೇಷ ಧ್ಯಾನ<br>ಬೆಳಿಗ್ಗೆ 10.57 ಘಂ. – ಸಂಜೆ 4.36 ಘಂ. |
| 25-12-10 | ಕ್ರಿಸ್‌ಮಸ್ ವಿಶೇಷ ಧ್ಯಾನ<br>ಮಧ್ಯಾಹ್ನ 12 ರಿಂದ 1 ರವರೆಗೆ |
| 26-12-10 | ಅಖಂಡ ಧ್ಯಾನ<br>ಬೆಳಿಗ್ಗೆ 6ಘಂಟೆ – ಸಂಜೆ 6 ಘಂಟೆ |

"ತಪೋವಾಣಿ"ಯ ಮುದ್ರಣಕ್ಕೆ ರೂ. 5000 ಮತ್ತು ಭಾನುವಾರದ ಪ್ರಸಾದವನ್ನು ಪ್ರಾಯೋಜಿಸುವುದಕ್ಕೆ ರೂ. 2000.

### ಭಾನುವಾರದ ಪ್ರಸಾದವನ್ನು ಪ್ರಾಯೋಜಿಸಿದವರು

| | |
|---|---|
| 03-10-10 | ಬ್ರಜಬಂಧು ಮಿಶ್ರಾ ಮತ್ತು ದೀಕ್ಷಾ ಸುರೇಶ್ |
| 10-10-10 | ಯಶೋದಾ, ಸುಧಾದೇವಿ ಪೋತ್ದಾರ್ ಮತ್ತು ಉಷಾ ಶರ್ಮಾ |
| 17-10-10 | ಅಂಜಲಿ ಪಾಟೀಲ್, ರತ್ನಾ ರಾವ್, ಹೆಚ್.ಎನ್.ಎಸ್.ಬಾಬು, ವಿನಯ್ ಮತ್ತು ಶೋಭಾ ಪೋತ್ದಾರ್ |
| 24-10-10 | ಗುರುಪಾದ ಸ್ವಾಮಿ, ಸುಜಾತಾ ಪಾಟೀಲ್ ಮತ್ತು ಸಂತೋಷ್ ಕೋರೆ |
| 31-10-10 | ಮಾರಪ್ಪ ಎಂ. ಮತ್ತು ಸಂತೋಷ್ ಕೋರೆ |

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 05 | ಭಾನು | ಅಮಾವಾಸ್ಯೆ |
| 21 | ಮಂಗಳ | ಪೂರ್ಣಿಮಾ, ಚಂದ್ರಗ್ರಹಣ |
| 25 | ಶನಿ | ಕ್ರಿಸ್‌ಮಸ್ |
| 26 | ಭಾನು | ಅಖಂಡಧ್ಯಾನ |
| 31 | ಶುಕ್ರ | ವಿಶ್ವ ಹೀಲಿಂಗ್ ದಿನ<br>ಸಾಯಂಕಾಲ 5.30 ಘಂಟೆ |

11-12-2010ರಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ ಗುರೂಜಿಯವರೊಂದಿಗೆ 'ಅನೌಪಚಾರಿಕ ಸಭೆ' ಇರುತ್ತದೆ. ಭಾಗವಹಿಸಲು ಆಸಕ್ತಿ ಇರುವವರು ತಮ್ಮ ಹೆಸರನ್ನು ಆಫೀಸಿನಲ್ಲಿ ರಿಜಿಸ್ಟರ್ ಮಾಡಬೇಕು.

26-12-2010ರಂದು
ತಪೋನಗರದಲ್ಲಿ ಅಖಂಡ ಧ್ಯಾನ
ಬೆಳಿಗ್ಗೆ 6 ಘಂಟೆ – ಸಂಜೆ 6 ಘಂಟೆ
ಎಲ್ಲರಿಗೂ ಸ್ವಾಗತ

ದಿನಾಂಕ 29-1-2011 ಮತ್ತು 30-1-2011ರಂದು ಗುರೂಜಿಯವರು ಮುಂಬೈ, ಪೂನಾ ಮತ್ತು ನಾಗಪುರ ದಲ್ಲಿ ಉಪನ್ಯಾಸಗಳನ್ನು ನೀಡಲಿದ್ದಾರೆ. ಇದರ ವಿವರಗಳನ್ನು ಜನವರಿ 2011ರ ವಾರ್ತಾಪತ್ರಗಳಲ್ಲಿ ಮುದ್ರಿಸಲಾಗುವುದು.

## ಲೈಟ್ ಚಾನಲ್ ವಿಶ್ವಸಂಚಲನದ ಇತ್ತೀಚಿನ ಸುದ್ದಿ

- ಅಕ್ಟೋಬರ್ ತಿಂಗಳ ಕೊನೆಯವರೆಗೆ, 5 ಲಕ್ಷಕ್ಕೂ ಹೆಚ್ಚು ಮಕ್ಕಳು ಲೈಟ್ ಚಾನಲ್ ಮಾಡಿದ್ದಾರೆ.
- ಅಕ್ಟೋಬರ್ ತಿಂಗಳಲ್ಲಿ ಶಾಲೆಗಳಿಗೆ ಹೆಚ್ಚಾಗಿ ರಜೆ ಇದ್ದರೂ, ನಮ್ಮ ವಾಲಂಟಿಯರ್‌ಗಳು ನೂರಕ್ಕಿಂತಲೂ ಹೆಚ್ಚು ಶಾಲೆಗಳಲ್ಲಿ 80,000ಕ್ಕೂ ಹೆಚ್ಚು ಮಕ್ಕಳಿಂದ ಲೈಟ್ ಚಾನಲ್ ಕಾರ್ಯಕ್ರಮವನ್ನು ನಡೆಸಿಕೊಟ್ಟಿದ್ದಾರೆ.
- 27–10–10 ಲೈಟ್ ಚಾನಲಿಂಗ್ ವಿಶ್ವಸಂಚಲನಕ್ಕೆ ಒಂದು ಮುಖ್ಯವಾದ ದಿನ ಏಕೆಂದರೆ ಅಂದು ಒಂದೇ ದಿನದಲ್ಲಿ ದೇಶದ ವಿವಿಧ ಭಾಗಗಳ 22,000 ಮಕ್ಕಳು ಲೈಟ್ ಚಾನಲ್ ಮಾಡಿದ್ದಾರೆ. ಸುಮಾರು 7,000ಕ್ಕೂ ಹೆಚ್ಚು ಮಕ್ಕಳು ಚೆನ್ನೈನ ಚೆಟ್ಟಿನಾಡ್ ವಿದ್ಯಾಶ್ರಮದ ಆವರಣದಲ್ಲಿ ಸೇರಿ ಒಂದೇ ಸಮಯದಲ್ಲಿ ಲೈಟ್ ಚಾನಲ್ ಮಾಡಿರುವುದು ಹೃದಯಸ್ಪರ್ಶಿಯಾಗಿದೆ.
- ಕೋಲಾರ ಜಿಲ್ಲೆಯ ಶಿಕ್ಷಣ ಇಲಾಖೆ ತಮ್ಮ ಜಿಲ್ಲೆಯ 5 ಲಕ್ಷಕ್ಕಿಂತಲೂ ಹೆಚ್ಚು ಮಕ್ಕಳಿಂದ ಲೈಟ್ ಚಾನಲ್ ಮಾಡಿಸಲು ಅನುಮತಿ ನೀಡಿದೆ.
- ಲೈಟ್ ಚಾನಲ್ಸ್ ವಾರ್ತಾಪತ್ರದ ಮೊದಲನೆಯ ಸಂಚಿಕೆ ನವಂಬರ್ 15, 2010ರಂದು ಬಿಡುಗಡೆಯಾಯಿತು. ■

## ಲೈಟ್ ಚಾನಲಿಂಗ್ ಅನುಭವಗಳು

ಅಕ್ಟೋಬರ್ 2ರಂದು ನಡೆಸಿದ ಲೈಟ್ ಚಾನಲ್ ಕಾರ್ಯಕ್ರಮದ ನಂತರ ತರಗತಿಯಲ್ಲಿ ಉಳಿದ ಒಬ್ಬ ವಿದ್ಯಾರ್ಥಿ ಮತ್ತು ಆಕೆಯ ತಂದೆತಾಯಿ ಒಂದು ದೊಡ್ಡ ಬಿಳಿ ಬಣ್ಣದ ಬೆಳಕಿನ ಗೋಳ ತರಗತಿಯಲ್ಲಿ ಕಾಣಿಸಿಕೊಂಡದ್ದನ್ನು ಗಮನಿಸಿದರು. –ಮೇಧಾ ಕುಲಕರ್ಣಿ, ವಾಲಂಟಿಯರ್

ನಾನು ಲೈಟ್ ಚಾನಲ್ ಕಾರ್ಯಕ್ರಮ ನಡೆಸಲು ಒಂದು ಶಾಲೆಗೆ ಹೋದಾಗ, ಅಲ್ಲಿಯ ತರಗತಿಯಲ್ಲಿನ ಒತ್ತಡ ಮತ್ತು ಗಾಬರಿ ನನ್ನ ಅರಿವಿಗೆ ಬಂತು. ಕಾರ್ಯಕ್ರಮದ ನಂತರ ಒಬ್ಬ ವಿದ್ಯಾರ್ಥಿ ತನ್ನೊಳಗೆ ಯಾವುದೋ ಚೈತನ್ಯವು ಹರಿದಂತಾಯಿತು ಎಂದು ಹೇಳಿದಾಗ ಇಡೀ ತರಗತಿ ನಕ್ಕಿತು. ನಂತರ ಅಧ್ಯಾಪಕಿಯೊಬ್ಬರು ತಾನು ಎಲ್ಲೆಡೆ ಬೆಳಕನ್ನು ನೋಡಿದ್ದಾಗಿಯೂ ಮತ್ತು ತನ್ನ ಮುಂದೆ ಬಿಳಿ ಬಣ್ಣದ ಬೆಳಕಿನ ಗೋಳವನ್ನು ನೋಡಿದ್ದಾಗಿಯೂ ತಿಳಿಸಿದರು. ಈ ಬೆಳಕು ಆಕೆಯಲ್ಲಿ ಕಾರ್ಯಕ್ರಮದ ಮೊದಲು ಇದ್ದ ಕೋಪ ಮತ್ತು ಒತ್ತಡವನ್ನು ತೆಗೆದುಹಾಕಿದ್ದಾಗಿಯೂ ತಿಳಿಸಿದರು. ಆಕೆಯ ಕಣ್ಣುಗಳಲ್ಲಿ ಕಣ್ಣೀರು ತುಂಬಿತು! ನಾನು ಮನತುಂಬಿ, ಸಂತೋಷ ಮತ್ತು ಪೂಜ್ಯಭಾವದಿಂದ ತರಗತಿಯಿಂದ ಹೊರಬಂದೆ – ನಿತ್ಯಾ ಜೇಮ್ಸ್, ವಾಲಂಟಿಯರ್

ಲೈಟ್ ಚಾನಲ್ ಕಾರ್ಯಕ್ರಮದ ಆರಂಭದಲ್ಲಿ ನನಗೆ ಕಾಲು ಮಡಚಿ ಕುಳಿತುಕೊಳ್ಳಲಾಗಲಿಲ್ಲ. ಆದರೆ ನನ್ನ ಮಂಡಿನೋವನ್ನು ಕಡೆಗಣಿಸಿ, ಕುಳಿತುಕೊಂಡು ಲೈಟ್ ಚಾನಲ್ ಮಾಡಿದೆ. ಕಾರ್ಯಕ್ರಮದ ನಂತರ ನನ್ನ ಮಂಡಿನೋವು ಮಾಯವಾಗಿ ಹೆಚ್ಚಿನ ಉಪಶಮನ ದೊರಕಿತು.

–ಜಯಲಕ್ಷ್ಮಿ ಐಯ್ಯರ್, ಮುಖ್ಯೋಪಾಧ್ಯಾಯಿನಿ, ಎ.ಎಸ್.ಕುಪ್ಪರಾಜು ಆಂಡ್ ಬ್ರದರ್ಸ್ ವಿದ್ಯಾನಿಕೇತನ್, ಬೆಂಗಳೂರು.

## ತಪೋನಗರ ಡೈರಿ

ಸೀಮಾ ಅಲ್‌ಮೇಲ್ ಸೋಮಯಾಜಿ; ಅನು: ಪಾಂಡುರಂಗ

ಅಕ್ಟೋಬರ್ ತಿಂಗಳು, ಹಬ್ಬಗಳ ವಾತಾವರಣದಿಂದ ಪ್ರಾರಂಭಗೊಂಡಿತು. ನವರಾತ್ರಿಯ ಸಮಯದಲ್ಲಿ, ದೇವಿಯ ಚೈತನ್ಯ ಶಕ್ತಿಗಳು ತಪೋನಗರ ಮತ್ತು ಇಡೀ ಜಗತ್ತನ್ನು ಆಶೀರ್ವದಿಸಿದವು. ಮನುಕುಲದ ಪ್ರಜ್ಞಾಪಲ್ಲಟದ ಹಿನ್ನಲೆಯಲ್ಲಿ ವಿಶೇಷವಾಗಿ, ವ್ಯಕ್ತಿಯ ಮಟ್ಟದ ಪ್ರಳಯದ ಪ್ರಕ್ರಿಯೆಯಲ್ಲಿ ದುಷ್ಟತನದ ಮೇಲೆ ಒಳ್ಳೆಯತನದ ವಿಜಯವು ಹೆಚ್ಚು ಸಮಂಜಸವೆನಿಸಿತು.

ಆಯುಧ ಪೂಜೆಯ ದಿನ ಗುರೂಜಿಯವರ ಸಮ್ಮುಖದಲ್ಲಿ ತಪೋನಗರದ ಎಲ್ಲಾ ನಿವಾಸಿಗಳು ತಮ್ಮ ವಾಹನಗಳೊಂದಿಗೆ ಒಂದೆಡೆ ಕಲೆತರು. ಎಲ್ಲ ವಾಹನಗಳನ್ನು ಗುರೂಜಿಯವರು ಆಶೀರ್ವದಿಸಿದರು.

ತಪೋನಗರದ ನಿವಾಸಿಗಳು ಒಂದೆಡೆ ಸೇರುವಂಥ ಅನೇಕ ಕಾರ್ಯಕ್ರಮಗಳು ಅಕ್ಟೋಬರ್ ತಿಂಗಳಲ್ಲಿ ನಡೆದವು. ಗುರೂಜಿಯವರು ಶ್ರೀದೇವಿಯವರ ಹೊಸ ಮನೆಯನ್ನು ಧ್ಯಾನದ ಮೂಲಕ ಚೈತನ್ಯಗೊಳಿಸಿದರು. ಶ್ರೀ ಗುರುರಾಜ್ ಕಾನಡೆಯವರ ಅವಳಿ ಮಕ್ಕಳ ಮತ್ತು ಶ್ರೀ ಬ್ರಜಬಂಧು ಮಿಶ್ರಾರವರ ಮಗನ ಹುಟ್ಟುಹಬ್ಬದ ಸಂದರ್ಭಗಳಲ್ಲಿ ನಿವಾಸಿಗಳೆಲ್ಲರೂ ಸೇರಿದ್ದರು.

ತಿಂಗಳ ಕೊನೆ ಭಾನುವಾರದಂದು ಮೂರು ಘಂಟೆಗಳ ಲೈಟ್ ಚಾನಲಿಂಗ್ ಕಾರ್ಯಕ್ರಮ ನಡೆಯಿತು.

ತಪೋನಗರದಲ್ಲಿ ಒಂದು ಒಲುಮೆಯ ನಾಯಿಯಿದೆ. ಅದರ ಹೆಸರು ಶೈನಿ. ಅದು ತುಂಬಾ ಶಾಂತ, ಕೋಪಗೊಳ್ಳದ ಮತ್ತು ಅನುರಾಗವುಳ್ಳ ಜೀವಿ. ಅದು ಆಹಾರಕ್ಕಾಗಿ ಜಗಳವಾಡುವುದಿಲ್ಲ. ಶೈನಿ ಯಾರ ಮನೆಗೆ ಹೋದರೂ, ಎಲ್ಲರೂ ಆಹಾರ ನೀಡುತ್ತಾರೆ. ಶೈನಿ ಆಫೀಸಿನ ಮುಂಭಾಗದಲ್ಲಿ ಸದಾ ಕುಳಿತಿದ್ದು ಎಲ್ಲರ ಗಮನ ಸೆಳೆಯುತ್ತದೆ. ಒಮ್ಮೆ ಬೇರೊಂದು ನಾಯಿ ಅದರ ಮೇಲೆ ಆಕ್ರಮಣ ಮಾಡಿದ್ದರ ಪರಿಣಾಮ, ಅದರ ಕಾಲುಮೂಳೆ ಮುರಿಯಿತು. ಆಗ ಅದರ ಶುಶ್ರೂಷೆಗೆ ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಲಾಯಿತು. ಹೇಗಿದ್ದರೂ ಸೂಕ್ತವಾದ ಹೆಸರನ್ನು ಪಡೆದಿರುವ ಶೈನಿ ತಪೋನಗರದ ವಿಶಿಷ್ಟ ಭಾಗ; ಕಾರಣ ಅದು ನೈಜ ಪ್ರೀತಿಯಿಂದ ಮತ್ತು ಶಾಂತ ಸ್ವಭಾವದಿಂದ ಮಿನುಗುತ್ತಿದೆ. ಇದರಿಂದ ಅದು ಈಗಾಗಲೇ ಬೆಳಕಿನಯುಗಕ್ಕೆ ಪ್ರವೇಶಿಸಿದೆ ಎಂದು ಅನಿಸುತ್ತಿದೆ. ■

## ಲೈಟ್ ಚಾನಲ್ಸ್
### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

## ಗುರೂಜಿಯವರ ನುಡಿಗಳು

(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)

(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)

03–10–2010

ದೇವರನ್ನು ಎಂದೂ ನಂಬದ, ಆದರೆ ಒಂದು ಮೌಲ್ಯ ವ್ಯವಸ್ಥೆಯಲ್ಲಿ ನಂಬಿಕೆ ಉಳ್ಳ 80 ವರ್ಷದ ಹಿರಿಯರೊಬ್ಬರು ಹೇಳಿದ್ದೇನೆಂದರೆ, ನಾವು ಕಣ್ಣುಗಳನ್ನು ಮುಚ್ಚಿಕೊಂಡಿದ್ದಾಗ ಸುಲಭವಾಗಿ ದೇವರನ್ನು ಅನುಭವಿಸಬಹುದು. ಆದರೆ ಕಣ್ಣುಗಳನ್ನು ತೆರೆದುಕೊಂಡಿರುವಾಗ ಅಲ್ಲ! ಇದೇ ರೀತಿ ದೇವರೊಂದಿಗಿನ ಸಂಪರ್ಕದ ಅರಿವನ್ನು ಸದಾ ಹೊಂದಿರುವುದು ಧ್ಯಾನ ಮಾಡದೇ ಇರುವ ಸಮಯಗಳಲ್ಲಿ ಸುಲಭವಲ್ಲ, ಆದರೂ ದೈವೀ ಸಂಪರ್ಕದಿಂದ ನಮಗೆ ಎಲ್ಲ ಬಲ, ವಿವೇಕ ಮತ್ತು ರಕ್ಷಣೆ ದೊರೆಯುತ್ತದೆ ಮತ್ತು ಆಗ ನಮ್ಮ ಬದುಕಿನಲ್ಲಿ ಯಾವ ತಪ್ಪೂ ಸಂಭವಿಸುವುದಿಲ್ಲ.

ನಿರಾಕಾರ ದೇವರಾದ ಬೆಳಕಿನೊಂದಿಗೆ ಏಕತೆಯನ್ನು ಅನುಭವಿಸುವುದು ಎಂದರೆ ಅತ್ಯುನ್ನತ ದರ್ಜೆಯ ಏಕತೆಯನ್ನು ಅನುಭವಿಸುವುದು. ದೇವರೊಂದಿಗೆ ಏಕತೆಯನ್ನು ಅನುಭವಿಸುವುದು ಎಂದರೆ ಸಮಾಧಿಗಿಂತಲೂ ಉತ್ತಮ. ನಾವು ದೇವರಂತೆ ಇರುತ್ತೇವೆ. ಈ ಅಂಶಗಳನ್ನು ನಾವು ಅರ್ಥ ಮಾಡಿಕೊಳ್ಳಬೇಕು, ಪ್ರಯತ್ನಪಟ್ಟು ಅನುಸರಿಸಬೇಕು ಮತ್ತು ಅಳವಡಿಸಿಕೊಳ್ಳಬೇಕು.

ಎಲ್ಲ ಧರ್ಮಗಳು ಶ್ರೇಷ್ಠ ಮಹಾಗುರುಗಳಿಂದ ಪ್ರಾರಂಭವಾಗಿರುವುದರಿಂದ ಧರ್ಮವನ್ನು ಸಂಪೂರ್ಣವಾಗಿ ತಿರಸ್ಕರಿಸಬಾರದು. ಸಾವಿರಾರು ವರ್ಷಗಳಲ್ಲಿ ಸಂಭವಿಸಿರುವ ವಿಕೃತಗಳನ್ನು ನಾವು ಅಲಕ್ಷಿಸಬೇಕು. ವೃಥಾ ಘರ್ಷಣೆ ಬೇಡ. ಆಧ್ಯಾತ್ಮಿಕ ಮಾರ್ಗ ವನ್ನು ಅನುಸರಿಸುವು ದೆಂದರೆ ಪ್ರಪಂಚ ದೊಂದಿಗೆ ನಡೆಯುವುದು, ಬೇರೆಯವರು ಅರ್ಥಮಾಡಿಕೊಳ್ಳಲು ಸಹಾಯಮಾಡುವುದೇ ಹೊರತು ಬೇರೆಯವರ ಮೇಲೆ ಒತ್ತಡ ಹೇರುವುದಲ್ಲ, ಒಳ್ಳೆಯ ವಿಷಯಗಳನ್ನು ಕೂಡಾ!

ಅನೇಕರಲ್ಲಿ ಆಧ್ಯಾತ್ಮಿಕ ಜಾಗೃತಿ ಮೂಡಿದೆ. ಇದು ಪ್ರೀತಿಯಂತಹ ಧರ್ಮದ ಜಾಗತಿಕ ಅಂಶಗಳು ಮೂಡಲು ಸಹಾಯ ಮಾಡುತ್ತದೆ. ಜನರು ಧರ್ಮವೆಂದರೆ ಒಂದು ಮೌಲ್ಯ ವ್ಯವಸ್ಥೆ ಎಂದು ಅರ್ಥಮಾಡಿಕೊಳ್ಳುತ್ತಿದ್ದಾರೆ. ಇದು ವಿಶ್ವಧರ್ಮ, ಎಲ್ಲ ಮತಧರ್ಮಗಳನ್ನು ಮೀರಿದ ಬೆಳಕಿನ ಯುಗದ ಧರ್ಮ. ಬೆಳಕಿನಯುಗ ನಮ್ಮಂತಹ ವ್ಯಕ್ತಿಗಳಿಂದ ಪ್ರಾರಂಭಗೊಳ್ಳುತ್ತದೆ. ಅದು ಆಂತರ್ಯದಲ್ಲಿ ಸಂಭವಿಸುತ್ತದೆ. ಈ ಅರಿವಿನಿಂದ, ನಮ್ಮ ಪ್ರತಿಯೊಬ್ಬರ ಗುರುತರ ಜವಾಬ್ದಾರಿ ಹೆಚ್ಚಿದೆ.

30ನೇ ಸೆಪ್ಟೆಂಬರ್, ಅಯೋಧ್ಯೆಯ ವಿಷಯಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ತೀರ್ಪು ಬರುವ ದಿನ ಇಡೀ ದೇಶದಲ್ಲಿ ಶಾಂತಿಯ ವಾತಾವರಣ ಕಂಡುಬಂದಿತು. ಪ್ರಪಂಚದಾದ್ಯಂತ ಧ್ಯಾನಿಗಳು ತಮ್ಮದೇ ಆದ ರೀತಿಯಲ್ಲಿ ಬೆಳಕನ್ನು ಹರಡಿದ ಪ್ರಯತ್ನದಿಂದ ಇದು ಸಾಧ್ಯವಾಯಿತು. ಅಲ್ಲದೆ, ಋಷಿಗಳು ಕೆಳತಂದ ಹೊಸ ಚೈತನ್ಯಗಳು, ಅದರಲ್ಲಿಯೂ ವಿಶೇಷವಾಗಿ ರಾ–ಚೈತನ್ಯಗಳು ತಮ್ಮ ಪ್ರಭಾವವನ್ನು ಉಂಟುಮಾಡಿದ್ದವು. ಜನರಲ್ಲಿ ಒಂದು ರೀತಿಯ ಜಾಗೃತಿ ಮತ್ತು ಪ್ರಬುದ್ಧತೆ ಮೂಡಿದೆ. ಇದು ಸಾಮೂಹಿಕ ವಿವೇಕ ಮತ್ತು ಸಾಮೂಹಿಕ ಸ್ಪಂದನಕ್ಕೆ ಸಾಕ್ಷಿಯಾಗಿದೆ. ಪ್ರಪಂಚ ಕ್ರಮೇಣ ಬದಲಾಗುತ್ತಿದೆ. ಜನರು ಭ್ರಷ್ಟತೆ, ಯುದ್ಧಗಳು, ಹಿಂಸೆಗಳನ್ನು ಮಾನಸಿಕವಾಗಿ ತಿರಸ್ಕರಿಸಿದಾಗ ಅವು ಮಾಯವಾಗುತ್ತವೆ.

ಹೀಲಿಂಗ್ ವಾಸಿಮಾಡುತ್ತದೆ, ಆರೋಗ್ಯವನ್ನು ಸುಧಾರಿಸುತ್ತದೆ ಮತ್ತು ಬೇಗ ಗುಣಪಡಿಸುತ್ತದೆ. ಅದು ಸಾವನ್ನು ತಡೆಯುವುದಿಲ್ಲ. ಆದರೆ ಒಬ್ಬ ವ್ಯಕ್ತಿ ನೋವಿಲ್ಲದೆ ದೇಹವನ್ನು ಬಿಡಲು, ಸುಲಭವಾಗಿ ಶಾಂತಿಯಿಂದ ಮೇಲೇರಲು ಅದು ಸಹಾಯ ಮಾಡುತ್ತದೆ.

ತಪೋನಗರಕ್ಕೆ ಬಂದಮೇಲೆ ನೋವಾಗಲಿ, ಸಮಸ್ಯೆಯಾಗಲಿ ಇರುವುದಿಲ್ಲ ಎಂಬ ವಿಷಯದಲ್ಲಿ ನಾವೆಲ್ಲ ಜಾಗೃತರಾಗಿರೋಣ. ನಾವು ಜಾಗೃತರಾಗಿದ್ದರೆ, ಇಲ್ಲಿರುವ ಚೈತನ್ಯಗಳು ನಮಗೆ ಸಹಾಯ ಮಾಡುತ್ತವೆ. ಪ್ರಪಂಚವನ್ನು ಪ್ರೀತಿಸೋಣ. ನಾವು ಈ ಪ್ರಪಂಚಕ್ಕೆ ಸೇರಿದವರಾಗಿರುವುದರಿಂದ ನಾವು ಅದರೊಂದಿಗೆ ವ್ಯವಹರಿಸೋಣ.

ಧ್ಯಾನ ಪ್ರಾರಂಭಿಸಿದ ಸ್ವಲ್ಪ ಸಮಯದ ನಂತರ ನಾವು ಮೌನವಾಗುತ್ತೇವೆ, ಸುತ್ತಮುತ್ತಲಿನ ಪ್ರಪಂಚದ ಬಗ್ಗೆ ಸಂಪೂರ್ಣವಾಗಿ ಅರಿವಿರುವುದಿಲ್ಲ. ಇದು ಸಮಾಧಿಯ ಪ್ರಾರಂಭ. ನಂತರ ನಾವು ಇದನ್ನು ಮೀರಿದ ಉನ್ನತ ಸಮಾಧಿಯ ಹಂತಕ್ಕೆ ಹೋಗುತ್ತೇವೆ. ಆಗ ನಮ್ಮ ಆಲೋಚನೆಗಳ, ಸುತ್ತಲಿನ ಪ್ರಪಂಚದ ಮತ್ತು ಎಲ್ಲ ವಿಷಯಗಳ ಬಗ್ಗೆ ಜಾಗೃತಿಯನ್ನು ಹೊಂದಿರುತ್ತೇವೆ, ಆದರೆ ನಮ್ಮಲ್ಲಿ ನಿಶ್ಚಲತೆ ಇರುತ್ತದೆ. ನಾವು ಮುಂದುವರಿದಂತೆ ನಮ್ಮ ಜಾಗೃತಿ ಇನ್ನೂ ಉನ್ನತ ಹಂತಗಳಿಗೆ ಸ್ಥಿತ್ಯಂತರವಾಗುತ್ತದೆ, ಆಗ ನಮ್ಮಲ್ಲಿ ಭೌತಿಕ ವಾಸ್ತವಗಳ ಜಾಗೃತಿ ಉಂಟಾಗುತ್ತದೆ. ಪರಿಪೂರ್ಣ ಸಮಾಧಿ ಎನ್ನುವುದು ಏಕಕಾಲಕ್ಕೆ ಎಲ್ಲದರ ಅರಿವನ್ನು ಹೊಂದಿರುವುದು. ಧ್ಯಾನದ ಕಾಲದಲ್ಲಿ ವಿಶ್ಲೇಷಣೆ ಮಾಡಬೇಡಿ ಅಥವಾ ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಡಿ, ಇಲ್ಲವಾದರೆ ಬುದ್ಧಿಶಕ್ತಿ ಕ್ರಿಯಾತ್ಮಕವಾಗಿ, ನಿಶ್ಚಲತೆಗೆ ವಿರುದ್ಧವಾಗಿ ಹೋಗುತ್ತದೆ.

10–10–2010

ನಾವು ಒಂದು ಮಂತ್ರ ಅಥವಾ ತಂತ್ರವನ್ನು ಒಂದು ದೊಡ್ಡ ತಂತ್ರದಿಂದ ತೆಗೆದುಕೊಳ್ಳಬಾರದು. ಇಡೀ ತಂತ್ರವನ್ನು ಪಾಲಿಸಬೇಕು. ಇದನ್ನು ಪುಸ್ತಕಗಳಲ್ಲಿ ಹೇಳದಿರಬಹುದು. ತಂತ್ರವನ್ನು ಒಬ್ಬ ವ್ಯಕ್ತಿ, ಒಬ್ಬ ಮಾರ್ಗದರ್ಶಕ ಅಥವಾ ಒಬ್ಬ ಗುರುವಿನಿಂದ ಪಡೆಯಬೇಕು, ಏಕೆಂದರೆ ಅವರು ನಮಗೆ ದೀಕ್ಷೆ ಕೊಡುತ್ತಾರೆ. ಅವರು ಸಾಕಷ್ಟು ಚೈತನ್ಯಗಳನ್ನು ಕೊಡುವುದಲ್ಲದೆ, ಮಂತ್ರವನ್ನು ಪುನರುಚ್ಚರಿಸಲು ನಮ್ಮನ್ನು ಸಿದ್ಧಗೊಳಿಸುತ್ತಾರೆ. ಯಾವುದೇ ಆಧ್ಯಾತ್ಮಿಕ ಅಭ್ಯಾಸಕ್ಕೆ ಮೇಲ್ವಿಚಾರಕರಿರಬೇಕು ಮತ್ತು ಕ್ರಮಬದ್ಧವಾಗಿ ಮಾಪನ ಮಾಡಬೇಕು, ಏಕೆಂದರೆ ಏನಾದರೂ ತಪ್ಪಾದರೆ ಅದು ಎಷ್ಟರಮಟ್ಟಿಗೆ ಅಪಾಯ ಉಂಟುಮಾಡುತ್ತದೆ ಎಂದರೆ ಮುಂದಿನ ಜನ್ಮಕ್ಕೂ ಕೂಡಾ ಅದು ವರ್ಗಾವಣೆಯಾಗುತ್ತದೆ. ಈ ಮಾರ್ಗ ಪರಿಪೂರ್ಣ ಮತ್ತು ಸಂಪೂರ್ಣವಾದ ಋಷಿಗಳ ಮಾರ್ಗ.

ನಾನು ಯೋಗದ ಬಗ್ಗೆ ಏನನ್ನೂ ತಿಳಿಯದ ಒಬ್ಬ ಹುಡುಗನನ್ನು ಭೇಟಿಯಾದೆ. ಆದರೆ ಅವನು ಇದ್ದಕ್ಕಿದಂತೆ ಆಸನಗಳಲ್ಲಿ ಕುಳಿತು, ವಿವಿಧ ಮುದ್ರೆಗಳು ಅಥವಾ ಕ್ರಿಯೆಗಳನ್ನು ಅಭ್ಯಾಸ ಮಾಡುತ್ತಿದ್ದ. ಅದರ ಪ್ರಾಮುಖ್ಯತೆ ಅವನಿಗೆ ತಿಳಿದಿರಲಿಲ್ಲ. ಅವನಿಗೆ ಅನೇಕ ಸಮಸ್ಯೆಗಳಿದ್ದವು. ಅವನು ತನ್ನ ಹಿಂದಿನ ಜನ್ಮದಲ್ಲಿ ತಾನೇ ಸ್ವಂತವಾಗಿ ಅಭ್ಯಾಸವನ್ನು ಪ್ರಾರಂಭಿಸಿ, ಅನೇಕ ತಪ್ಪುಗಳನ್ನು ಮಾಡಿ ಮಧ್ಯದಲ್ಲಿ ಅಭ್ಯಾಸವನ್ನು ಬಿಟ್ಟಿದ್ದ ಎಂಬುದನ್ನು ನಾನು ಅರ್ಥಮಾಡಿಕೊಂಡೆ. ಸ್ವಂತವಾಗಿ ಯಾವ ಅಭ್ಯಾಸವನ್ನೂ ಮಾಡಬಾರದು.

ನೀವು ಎಲ್ಲವನ್ನೂ ತಿಳಿಯಬಹುದು ಮತ್ತು ಎಲ್ಲ ಪುಸ್ತಕಗಳನ್ನು ಓದಬಹುದು ಆದರೆ ಒಂದು ಮಾರ್ಗವನ್ನು ಜೀವನಪರ್ಯಂತ ಅನುಸರಿಸಿ. ಇದು ಗೊಂದಲ ಮತ್ತು ಹಾನಿಯನ್ನು ತಪ್ಪಿಸುತ್ತದೆ ಮತ್ತು ಖಚಿತವಾದ ಹಾಗೂ ವೇಗವಾದ ಬೆಳವಣಿಗೆಗೆ ಸಹಾಯ ಮಾಡುತ್ತದೆ.

ನಾವು ನಮ್ಮ ಸಾಧನೆಯನ್ನು ಪ್ರಾರಂಭಿಸಿದಾಗ ಮೇಲ್ನೋಟಕ್ಕೆ ಶಿಸ್ತುಗಳೆನಿಸಿದ ಆಹಾರದ ಆದ್ಯತೆಗಳು ಇತ್ಯಾದಿ ಮುಖ್ಯವೆನಿಸುತ್ತದೆ. ಇದೇ ರೀತಿ ನಾವು ಧ್ಯಾನಾಭ್ಯಾಸವನ್ನು ತೆಗೆದುಕೊಂಡಾಗ ಎಲ್ಲಾ ಪೂರ್ವಭಾವಿ ಸಿದ್ಧತೆಗಳು ಮುಖ್ಯ. ನಾವು ಉನ್ನತ ಹಂತಗಳನ್ನು ತಲುಪಿದಾಗ ಇವುಗಳು ಅಪ್ರಸ್ತುತವಾಗುತ್ತವೆ.

17–10–2010

ನಮ್ಮ ಭೂಮಿ ತನ್ನದೇ ಆದ ಸೂಕ್ಷ್ಮ ಪ್ರತಿರೂಪವನ್ನು ಹೊಂದಿದೆ. ನಾವೆಲ್ಲ

# ಗುರೂಜಿಯವರ ನುಡಿಗಳು

(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)

(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)

ಸೂಕ್ಷ್ಮ ರೂಪದಲ್ಲಿ ಅಲ್ಲಿ ಇದ್ದೇವೆ. ಸೂಕ್ಷ್ಮ ಭೂಮಿ ಎರಡನೇ ಸೂರ್ಯನಿಂದ ಚೈತನ್ಯಗಳನ್ನು ಪಡೆಯುತ್ತದೆ. ಅತ್ರಿ ಮಹರ್ಷಿಗಳ ಅನುಮತಿ ಪಡೆದು ನಾವು ಸೂಕ್ಷ್ಮ ರೂಪದಲ್ಲಿ ಅಲ್ಲಿಗೆ ಹೋಗಬಹುದು. ಅತ್ರಿ ಮಹರ್ಷಿಗಳು ಈ ಭೂಮಿ ಮತ್ತು ಸೂಕ್ಷ್ಮ ಭೂಮಿಯ ಪ್ರಭಾರಿಯಾಗಿದ್ದಾರೆ ಹಾಗೂ ಅನೇಕ ಘಟನೆಗಳನ್ನು ತಪ್ಪಿಸುವವರು ಮತ್ತು ಹೊಸದನ್ನು ಸೃಷ್ಟಿಸುವವರೂ ಕೂಡಾ ಆಗಿದ್ದಾರೆ. ನಾವು ಅಲ್ಲಿಗೆ ಹೋಗಿ ಈ ಚೈತನ್ಯಗಳನ್ನು ಪಡೆದು ಹಿಂದಿರುಗಿ ಬರಬಹುದು.

ಬೆಳಕು ಎನ್ನುವುದು ಪ್ರೀತಿ, ವಿವೇಕ ಮತ್ತು ಶಾಂತಿ ಎಂದು ನಮಗೆ ತಿಳಿದಿದೆ. ಬೆಳಕಿಗೆ ಗುಣಪಡಿಸಬಲ್ಲ ಶಕ್ತಿಗಳಿವೆ. ಇದಕ್ಕೆ ಇನ್ನೊಂದು ಬಹಳ ಮುಖ್ಯವಾದ ಅಂಶ ಸೇರಿಸಬಹುದು, ಬೆಳಕು ಸಮೃದ್ಧತೆಯನ್ನು ಹೊಂದಿದೆ. ನೀವು ಹೆಚ್ಚು ಬೆಳಕನ್ನು ಹೊಂದಿರಿ, ನಿಮಗೆ ಸಮೃದ್ಧವಾದ ಪ್ರೀತಿ, ಶಾಂತಿ ಇತ್ಯಾದಿ ದೊರಕುತ್ತವೆ. ಸಮೃದ್ಧತೆ ಲೌಕಿಕವಾದದ್ದೇ ಆಗಬೇಕಾಗಿಲ್ಲ.

ಬೆಳಕಿಗೆ ಏಳು ನಿಯಮಗಳಿವೆ: ನಿಮ್ಮ ಶರೀರ ವ್ಯವಸ್ಥೆಯಲ್ಲಿ, ಆಂತರ್ಯದ ಕೇಂದ್ರದಲ್ಲಿ ಬೆಳಕನ್ನು ಅನುಭವಿಸಿ. ಅತ್ಯುನ್ನತ ಕೇಂದ್ರವಾದ ದೇವರೊಂದಿಗೆ ಸಂಪರ್ಕವಾಡಿ. ಇಡೀ ಪ್ರಪಂಚದೊಂದಿಗೆ ಏಕತೆಯನ್ನು ಅನುಭವಿಸಿ. ಬೆಳಕನ್ನು ಹರಡಿ. ಬೆಳಕನ್ನು ವ್ಯಕ್ತಪಡಿಸಿ. ಬೆಳಕನ್ನು ಯಾವಾಗಲೂ ನಿಮ್ಮೊಂದಿಗೆ ಕೊಂಡೊಯ್ಯಿರಿ ಮತ್ತು ಬೆಳಕಿನಯುಗದ ನಾಗರಿಕರಂತೆ ವರ್ತಿಸಿ. ನೀವೇ ಬೆಳಕಾಗಿ.

ಬೆಳಕಿನ ಏಳು ಮಾರ್ಗಗಳಿವೆ: ಯಾವಾಗಲೂ ಸಂತೃಪ್ತಿ ಮತ್ತು ಶಾಂತಿಯಿಂದ ಇರುವುದು. ನಿಮ್ಮ ಸುತ್ತ, ವ್ಯಕ್ತಿಗಳಲ್ಲಿ ಮತ್ತು ಪ್ರಪಂಚದಲ್ಲಿರುವ ಅಪೂರ್ಣತೆಗಳನ್ನು ಒಪ್ಪಿಕೊಳ್ಳುವುದು. ಒಳ್ಳೆಯವರಾಗಿರುವುದು. ಸರಳವಾಗಿರುವುದು. ಸತ್ಯಪರರಾಗಿರುವುದು. ಜೀವನವನ್ನು ಒಂದು ಬೆಳಕಿನ ಮಾರ್ಗವೆಂದು ಸಂಭ್ರಮಿಸುವುದು. ಸಮೃದ್ಧತೆಯನ್ನು ನಾವೆಲ್ಲ ಹಂಚಿಕೊಳ್ಳುವುದು.

ಸತ್ಯವನ್ನು ತಿಳಿದಿರುವುದು ಒಳ್ಳೆಯದು, ಆದರೆ ಅಷ್ಟು ಸಾಲದು. ನಾವು ಅನುಭವಿಸಿದಾಗ ಮಾತ್ರ ಸತ್ಯದ ಬಗ್ಗೆ ಸಂಪೂರ್ಣ ವಿಷಯ ತಿಳಿಯುತ್ತದೆ. ಇಲ್ಲವಾದರೆ ಅದರ ಬಗ್ಗೆ ಭಾಗಶಃ ಸತ್ಯ, ಬುದ್ಧಿಶಕ್ತಿಯಿಂದ ತಿಳಿಯುತ್ತದೆ. ಅನುಭವ ವಿವೇಕವನ್ನು ತರುತ್ತದೆ. ಸಣ್ಣ ಅನುಭವಗಳು, ದೊಡ್ಡ ಅನುಭವಗಳಿಗೆ ಮತ್ತು ಉನ್ನತ ಸತ್ಯಗಳಿಗೆ ದಾರಿ ತೋರಿಸುತ್ತವೆ. ನಾವು ಮುನ್ನುಗ್ಗುವ ದಾರಿಯಲ್ಲಿ ಆಗುವ ಅದ್ಭುತ ಬದಲಾವಣೆಗಳನ್ನು ಒಪ್ಪಿಕೊಳ್ಳಲು ಮತ್ತು ಅರ್ಥಮಾಡಿಕೊಳ್ಳಲು ಹಳೆಯ ಯುಗವಾದ ಕಲಿಯುಗದ ರೀತಿ ನೀತಿಗಳನ್ನು ಬಿಡಬೇಕು.

ಅಕ್ಟೋಬರ್ 13, ಈ ವರ್ಷದ ಅತ್ಯಂತ ಮಹತ್ವದ ದಿನ ಏಕೆಂದರೆ ಆ ದಿನ ಚಿಲಿಯಲ್ಲಿ 33 ಗಣಿ ಕಾರ್ಮಿಕರು ದುರಂತದಲ್ಲಿ 69 ದಿನಗಳು ಭೂಮಿಯೊಳಗೆ ಸಿಕ್ಕಿಕೊಂಡಿದ್ದು ಜೀವಂತವಾಗಿ ಬದುಕುಳಿದು ಹೊರಗೆ ಬಂದರು. ಅವರು ಬದುಕುವ ಭರವಸೆಯನ್ನು ಬಿಟ್ಟಿರಲಿಲ್ಲ. ಅವರು ಅಲ್ಲಿ ಹೇಗಿದ್ದರು ಎಂಬುದನ್ನು ತಿಳಿಯುವುದು ಅಸಾಧ್ಯ. ಅವರು ನಿಜವಾದ ಹೀರೋಗಳು.

ನೀವು ಹೀಲ್ ಮಾಡುವ ಮೊದಲು, ಹೀಲಿಂಗ್ ದೈವ ಸಂತೋಷಿ ದೇವಿಯನ್ನು ಭಕ್ತಿಯಿಂದ ಪೂಜಿಸಿ. ಅವಳು ಇಲ್ಲಿ ಸಂಗ್ರಹಿಸಿಟ್ಟಿರುವ ಅನೇಕ ಚೈತನ್ಯಗಳ ಪ್ರಭಾರಿಯಾಗಿದ್ದಾಳೆ ಹಾಗೂ ಚೈತನ್ಯಗಳ ಹರಿವನ್ನು ನಿರ್ವಹಿಸುತ್ತಾಳೆ.

ಇಂದಿನಿಂದ ನಾನು ಕೆಲವು ಹೊಸ ತಂತ್ರಗಳನ್ನು ಪರಿಚಯ ಮಾಡಿಸುತ್ತೇನೆ. ಋಷಿಗಳ ಜೊತೆ ಸಂಪರ್ಕ ಮಾಡುವ ಅಭ್ಯಾಸದಿಂದ ಪ್ರಾರಂಭ ಮಾಡೋಣ. ಭೂಮಿಯ ಮೇಲೆ ಈ ಕೇಂದ್ರ ಮತ್ತು ಆನೇಕಲ್‌ನ ಕೇಂದ್ರಗಳ ಪ್ರಭಾರಿ ಎಂದರೆ ವೇದ ವ್ಯಾಸ ಮಹರ್ಷಿ. ಅವರು ಇಲ್ಲಿ ನಡೆಯುವ ಪ್ರತಿ ತರಗತಿಯಲ್ಲೂ ಲಭ್ಯವಿರುತ್ತಾರೆ. ನೀವು ಎಲ್ಲಿದ್ದರೂ ಬೆಳಕಿನ ರೂಪದಲ್ಲಿ ನಿಮ್ಮ ಮುಂದೆ ಇದ್ದಾರೆ ಎಂದು ಕಲ್ಪಿಸಿಕೊಳ್ಳಿ. ಈ ವೆಬ್‌ಕಾಸ್ಟ್ ಅನ್ನು ನೋಡುತ್ತಿರುವ ಸಾಧಕರು ಈ ಋಷಿ ನಿಮ್ಮ ಮುಂದೆ ಇದ್ದಾರೆಂದು ಕಲ್ಪಿಸಿಕೊಳ್ಳಬೇಕು. ಅವರೊಡನೆ ಸುಮಾರು 5 ರಿಂದ 10 ನಿಮಿಷಗಳವರೆಗೆ ಮಾತನಾಡಿ.

**24–10–2010**

ಒಬ್ಬ ವ್ಯಕ್ತಿ ಬಸ್ಸಿನಲ್ಲಿ ಪ್ರಯಾಣಿಸುವಾಗ ಹೊರಗಡೆ ಜನರು ಓಡಾಡುವುದನ್ನು ನೋಡಿದರು. ಇದ್ದಕ್ಕಿದ್ದಂತೆ ಆಕೆಯಲ್ಲಿ ಒಂದು ರೀತಿಯ ಪ್ರೀತಿ ಉಕ್ಕಿ ಹರಿಯಿತು ಮತ್ತು ಎಲ್ಲರನ್ನು ಬೆಳಕು ಎಂದು ಪರಿಭಾವಿಸಿದಳು. ಅದೊಂದು ಅದ್ಭುತ ಅನುಭವ ಮತ್ತು ಏಕತೆಯನ್ನು ಅನುಭವಿಸುವ ಒಂದು ಭಾಗ. ಈ ವ್ಯಕ್ತಿ ಇದ್ದಕ್ಕಿದ್ದಂತೆ ವಿಶ್ವಾತ್ಮಕವಾದರು. ನಾವು ಯಾವಾಗಲೂ ಬೆಳಕನ್ನು ಹೊಂದಿದ್ದರೆ, ಮತ್ತು ಜನ, ಜೀವನ ಮತ್ತು ಈ ಪ್ರಪಂಚವನ್ನು ಪ್ರೀತಿಸಿದಾಗ ಹೀಗೆ ಸಂಭವಿಸುತ್ತದೆ.

ಒಬ್ಬ ಮಹಿಳೆ ತಮ್ಮ ಪತಿ ಬೇರೆಯವರಿಗೆ ಹೀಲಿಂಗ್ ಚೈತನ್ಯಗಳನ್ನು ಕಳುಹಿಸುತ್ತಿದ್ದುದರಿಂದ ಮಧುಮೇಹಿಯಾಗಿದ್ದಾರೆಂದು ತಿಳಿದಿದ್ದಾರೆ. ಇಂಥ ವಿಲಕ್ಷಣ ಭಯ ವಿಷಾದನೀಯ. ಬೆಳಕನ್ನು ಚಾನಲ್ ಮಾಡುವುದರಿಂದ ಯಾವ ರೀತಿಯ ಕಾಯಿಲೆ ಬರುವುದಿಲ್ಲ ಎಂಬ ಭರವಸೆಯನ್ನು ನಾನು ಕೊಡಬಯಸುತ್ತೇನೆ.

ಈ ಕಾಲಘಟ್ಟದಲ್ಲಿ ಈ ಭೂಮಿಯಲ್ಲಿ ಸಂಪೂರ್ಣವಾಗಿ ಏಕತೆಯನ್ನು ಅನುಭವಿಸಲು ಆಗುವುದಿಲ್ಲ ಎಂಬುವುದನ್ನು ಒಪ್ಪಿಕೊಳ್ಳೋಣ. ಏಕತೆಯನ್ನು ಸಂಪೂರ್ಣವಾಗಿ ಅನುಭವಿಸುವ ಇತರ ಬೇರೆ ಭೂಮಿಗಳಿವೆ. ನಾವೆಲ್ಲ ಒಂದು ಎಂದು ಆಲೋಚನೆ ಮಾಡಬಹುದು. ಎಲ್ಲ ವ್ಯತ್ಯಾಸಗಳನ್ನು ಅಲಕ್ಷಿಸಿ ಗುಂಪಿನ ಮಟ್ಟದಿಂದ ಏಕತೆಯನ್ನು ಅಭ್ಯಾಸ ಮಾಡುವುದನ್ನು ಪ್ರಾರಂಭಿಸೋಣ. ನಾವು ಧ್ಯಾನಾಭ್ಯಾಸಿಗಳು. ನಾವು ಋಷಿಗಳೊಡನೆ, ಒಂದು ಪಥದಲ್ಲಿ, ಒಂದು ಆಧ್ಯಾತ್ಮಿಕ ಆಶ್ರಯದಲ್ಲಿದ್ದೇವೆ. ಪ್ರಾರಂಭಿಸಲು ಅಷ್ಟು ಸಾಕು.

ಒಬ್ಬ ವ್ಯಕ್ತಿ ಬರೆದರು: "ನಮ್ಮ ಸುತ್ತಮುತ್ತ ಇಷ್ಟೊಂದು ದ್ವೇಷ, ದುರಾಸೆ ಮತ್ತು ಹರಟೆ ಇತ್ಯಾದಿ ಇವೆ. ನಾನು ಸಾಕಷ್ಟು ಧ್ಯಾನ ಮಾಡುತ್ತಿದ್ದೇನೆಯೇ? ಎಂದು ನನ್ನನ್ನು ಪ್ರಶ್ನಿಸಿಕೊಳ್ಳುತ್ತೇನೆ. ನಾನು ಹೆಚ್ಚು ಧ್ಯಾನ ಮಾಡಬೇಕು ಮತ್ತು ಬೆಳಕನ್ನು ಹೆಚ್ಚಾಗಿ ಚಾನಲ್ ಮಾಡಬೇಕು." ಇದು ನಾವು ಹೆಚ್ಚಾಗಿ ಶ್ರಮಿಸಲು ಪ್ರಚೋದಿಸುತ್ತದೆ. ಅವರು ಹೇಳಿರುವುದಷ್ಟೂ ವಾಸ್ತವ. ಆದರೆ ಯಾರೂ ಭ್ರಮನಿರಸನ ಅಥವಾ ವಿಫಲತೆಯ ಭಾವನೆ ಹೊಂದಬಾರದು. ಜನರು ಬದಲಾಗುತ್ತಿದ್ದಾರೆ, ಪ್ರಪಂಚ ಬದಲಾಗುತ್ತಿದೆ ಎಂಬುದನ್ನು ನಾವು ತಿಳಿಯೋಣ. ನಮ್ಮ ಕೈಯಲ್ಲಿ ಸಾಧ್ಯವಾದುದನ್ನು ಮಾಡೋಣ.

ನಮ್ಮಲ್ಲಿ ಅನೇಕರು ಭಾನುವಾರದ ಕಾಂಟಾಕ್ಟ್ ಸೆಶನ್‌ನಲ್ಲಿ ವ್ಯಾಸ ಮಹರ್ಷಿಗಳೊಡನೆ ಸಂಪರ್ಕವನ್ನು ಪಡೆದಿದ್ದಾರೆ. ಆದರೆ ಮನಸ್ಸು ಯುಕ್ತಿಗಳನ್ನು ಮಾಡುವುದರ ಬಗ್ಗೆ ಜಾಗರೂಕರಾಗಿರಿ. ಅದು ನಾವು ಇಷ್ಟಪಡುವ ಉತ್ತರಗಳನ್ನು ನೀಡುತ್ತದೆ. ಇದಕ್ಕಾಗಿ ಹೆದರಬೇಡಿ. ಅದು ಸುಲಭವಲ್ಲ ಆದರೆ ಕಷ್ಟವೂ ಅಲ್ಲ.

ನಾನು ಕೆಲವು ಸೂಚನೆಗಳನ್ನು ಕೊಡುತ್ತೇನೆ: ನಾವು ಅತ್ಯಂತ ಸಹನೆಯಿಂದ ಇರಬೇಕು. ನೀವು ಮೊದಲ ಬಾರಿಗೆ ಕುಳಿತುಕೊಂಡು ಪ್ರಶ್ನೆಯನ್ನು ಕೇಳಿದ ಕೂಡಲೆ ಉತ್ತರವನ್ನು ನಿರೀಕ್ಷಿಸಬೇಡಿ. ನಾವು ಉತ್ತರವನ್ನು ತಿಳಿಯಲು ಆಗುವುದಿಲ್ಲ. ಅಭ್ಯಾಸವನ್ನು ಬಿಡಬೇಡಿ. ನೀವು ಮನೆಯಲ್ಲಿ ಕೂಡಾ ಯಾವಾಗ ಬೇಕಾದರೂ ಈ ಅಭ್ಯಾಸ ಮಾಡಬಹುದು. ನೀವು ಭಾವೋದ್ರೇಕಕ್ಕೆ ಒಳಗಾಗಬೇಡಿ. ನಿಮ್ಮ ಮನಸ್ಸನ್ನು ಶಾಂತಿಯಿಂದ ಮತ್ತು ಖಾಲಿಯಾಗಿ ಇರಿಸಿ. ಯಾವುದನ್ನೂ ನಿರೀಕ್ಷಿಸಬೇಡಿ. ಸಂದೇಶ ಮಿಂಚುಗಳಲ್ಲಿ ಬರುತ್ತದೆ. ಹೊಳೆದ ವಿಷಯವನ್ನು ಗುರುತು ಮಾಡಿಕೊಳ್ಳಿ. ಇದು ಬಹಳ ಮುಖ್ಯ. ನೀವು ಪಡೆದುದನ್ನು ವಿಶ್ಲೇಷಣೆ ಮಾಡಲು ಪ್ರಯತ್ನಿಸಬೇಡಿ. ಭಾವೋದ್ರಿಕ್ತರಾಗಬೇಡಿ. ನೀವು ಭಾವೋದ್ರಿಕ್ತರಾದರೆ ಸಂಪರ್ಕವನ್ನು ಕಳೆದುಕೊಳ್ಳುವಿರಿ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 1000/–), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 700/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ಎಲ್ಲಾ ಪ್ರಶ್ನೆಗಳಿಗೆ ಮತ್ತು ಸಂದೇಹಗಳಿಗೆ ಗುರೂಜಿಯವರೇ ಉತ್ತರಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಪತ್ರಗಳು

**ಸಂ: ವೈಶಾಲಿ ಜೋಶಿ; ಅನು: ಸುಧಾಕರ್**

ರಾಷ್ಟ್ರಮಟ್ಟದ ಮಾಹಿತಿ ಕೇಂದ್ರಕ್ಕೆ ತಳಹದಿಯಾಗುವ ವೆಬ್‌ಅಪ್ಲಿಕೇಶನ್ ಯೋಜನೆಯನ್ನು ನಾನು ಕೈಗೆತ್ತಿಕೊಂಡಿದ್ದೆ. ನಿಮ್ಮ ಮತ್ತು ಸಪ್ತಋಷಿಗಳ ಆಶೀರ್ವಾದದಿಂದಾಗಿ ನನಗೆ ಈ ಯೋಜನೆಯನ್ನು ಎರಡು ವರ್ಷಗಳ ಒಳಗೆ ಯಶಸ್ವಿಯಾಗಿ ಪೂರ್ಣಗೊಳಿಸಲು ಸಾಧ್ಯವಾಯಿತು. ಇದು ಮುಂದಿನ ತಿಂಗಳು ಉದ್ಘಾಟನೆಗೊಳ್ಳಲಿದೆ. ನಿಮ್ಮ ಸಹಾಯಕ್ಕಾಗಿ ಧನ್ಯವಾದಗಳು. – ಪದ್ಮಶ್ರೀ

ನಿಮ್ಮ ಸಲಹೆಯಂತೆ ನಾನು ಬೆಳಕನ್ನು ಸಂಗಾತಿಯಾಗಿ ಮಾಡಿಕೊಂಡೆ. ನಾನು ತೊಂದರೆಗೆ ಒಳಗಾದಾಗ ಮತ್ತು ನನಗೆ ಮಾರ್ಗದರ್ಶನ ಬೇಕಾದಾಗಲೆಲ್ಲ ನಾನು ಬೆಳಕಿನೊಡನೆ ಮಾತನಾಡಿದೆ. ಮೊದಲಿಗೆ ನನಗೆ ಉತ್ತರ ಸಿಗುತ್ತಿರಲಿಲ್ಲ, ಆದರೆ ಸಾಂತ್ವನ ಸಿಗುತ್ತಿತ್ತು. ಒಂದು ತಿಂಗಳ ಸತತ ಪ್ರಯತ್ನದ ನಂತರ ಬೆಳಕು, ಋಷಿಗಳು ಮತ್ತು ನಿಮ್ಮ ಕೃಪೆಗಳಿಂದ ನಾನು ಈಗ ಶಾಂತತೆಯಿಂದಿದ್ದೇನೆ. ನಿಮಗೆ ಧನ್ಯವಾದಗಳು. – ನಿಹಾರಿಕಾ ರಾಜನಾಲ

ಆಫ್ರಿಕಾದ ನಮ್ಮ ಸ್ನೇಹಿತರು, ನಾವು ಅಲ್ಲಿ ಪ್ರಯಾಣಮಾಡುವಾಗ ಜಾಗರೂಕರಾಗಿರಬೇಕೆಂದು ಎಚ್ಚರಿಸಿದ್ದರು. ನಾವು ಮಾನಸಿಕವಾಗಿ ಅಧೈರ್ಯಗೊಳ್ಳುವ ಬದಲು, ನಮ್ಮಲ್ಲಿ ಬೆಳಕನ್ನು ತುಂಬಿಕೊಂಡೆವು. ಬಡತನದಿಂದ ಬಳಲುತ್ತಿದ್ದ ಆ ಜನರ ಕೈಗಳಲ್ಲಿ ಬಂದೂಕುಗಳನ್ನು ನೋಡುವ ಬದಲು ನಾವು ಅವರಿಂದ ಹೃತ್ಪೂರ್ವಕ ಹಸ್ತಲಾಘವವನ್ನು ಪಡೆದೆವು. ನಾನು ಲವಲವಿಕೆ ಮತ್ತು ಭರವಸೆಯಿಂದ ತುಂಬಿದ್ದ ಅವರ ನಗುಮುಖವನ್ನು ನೋಡಿದೆ. ಸ್ನೇಹಿತರು ಮುನ್ನೆಚ್ಚರಿಸಿದಂತೆ ದರೋಡೆಗೆ ಒಳಗಾಗುವ ಬದಲು, ಒಬ್ಬ ವ್ಯಕ್ತಿ ನಮ್ಮ ಜೇಬಿನಿಂದ ಬಿದ್ದಿದ್ದ ಡಾಲರ್‌ಗಳನ್ನು ತಂದು ನಮಗೆ ಒಪ್ಪಿಸಿದ! ಇದನ್ನು ಅನುಭವಿಸುವ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಮತ್ತು ನಮ್ಮನ್ನು ರಕ್ಷಿಸಿದ್ದಕ್ಕಾಗಿ ನಾವು ಅಲ್ಲಿಂದಲೇ ನಿಮಗೆ, ಋಷಿಗಳಿಗೆ ಮತ್ತು ದೇವರಿಗೆ ವಂದಿಸಿದೆವು. –ವಿದ್ಯಾ ವಿಶ್ವಾಮಿತ್ರ

ನಾನು ನಿಮ್ಮ ಮೂಲಕ, ನಮ್ಮ ಸ್ನೇಹಿತರಿಗೆ ಬೆಳಕನ್ನು ಕಳುಹಿಸಿ ಸಹಾಯ ಮಾಡಿದ ಪ್ರತಿಯೊಬ್ಬ ಕಾರ್ಯಕರ್ತರಿಗೂ ಧನ್ಯವಾದಗಳನ್ನು ತಿಳಿಸುತ್ತೇನೆ. ಬೆಳಕು ಕೆಲಸ ಮಾಡುತ್ತದೆ ಮತ್ತು ಎಲ್ಲರನ್ನೂ ಬಹಳ ಸಂತೋಷದಿಂದಿಡುತ್ತದೆ ಎಂದು ಅವರಿಗೆ ಮನವರಿಕೆಯಾಗಲಿ.

ನಿಮ್ಮ ಕಾರ್ಯಕರ್ತರು, ಅವರಿಗೆ ಅಪರಿಚಿತರಾದವರಿಗೂ ಮತ್ತು ಅವರ ಜೀವನದಲ್ಲಿ ಎಂದೂ ನೋಡದೇ ಇರಬಹುದಾದಂಥವರಿಗೂ ಸಹಾಯ ಮಾಡುತ್ತಿರುವುದನ್ನು ತಿಳಿದು ಸಂತೋಷವೆನಿಸುತ್ತದೆ. ಅವರು ಪ್ರತಿಫಲಾಪೇಕ್ಷೆ ಇಲ್ಲದೆ ಕೆಲಸ ಮಾಡುತ್ತಿದ್ದಾರೆ. ಇದು ನಿಜವಾಗಿಯೂ ಅಸಾಮಾನ್ಯ ಮತ್ತು ಅದ್ವಿತೀಯ. –ಮನಿಷ್ ಕುಮಾರ್

ಜೀವನದಲ್ಲಿ ತೊಂದರೆಗೊಳಗಾಗಿರುವ, ಮತ್ತು ಸಾಂತ್ವನ, ಹೀಲಿಂಗ್ ಹಾಗೂ ಬೆಳಕಿನ ಅವಶ್ಯಕತೆಯಿರುವ ಅನೇಕ ವ್ಯಕ್ತಿಗಳು ನನ್ನ ಸಂಪರ್ಕಕ್ಕೆ ಬರುತ್ತಾರೆ. ನನ್ನಿಂದ ಅವರಿಗೆ ಏನು ಮಾಡಲು ಸಾಧ್ಯವೋ ಅದೆಲ್ಲವನ್ನು ಮಾಡಿ, ಅವರಿಗೆ ಲೈಟ್ ಚಾನಲ್ ಮಾಡಲು ಉತ್ತೇಜಿಸುತ್ತೇನೆ. ನಿಮ್ಮಿಂದ ಮಾರ್ಗದರ್ಶನ ಮತ್ತು ಬೆಳಕನ್ನು ಪಡೆದುದಕ್ಕಾಗಿ ನನ್ನ ಹೃತ್ಪೂರ್ವಕ ವಂದನೆಗಳು. –ಜೆನಿಫರ್ ಡಯಾನೆಜ್

ಅದ್ಭುತವಾದ ನಿಮ್ಮ ಭಾನುವಾರದ ಉಪನ್ಯಾಸಗಳಿಗಾಗಿ ಮತ್ತೊಮ್ಮೆ ವಂದಿಸುತ್ತೇನೆ. ನಮ್ಮೆಲ್ಲರ ಸಂಪ್ರದಾಯಬದ್ಧ ಧಾರ್ಮಿಕ ಅಭ್ಯಾಸಗಳು ವಿಭಿನ್ನವಾಗಿದ್ದರೂ, ನಾವೆಲ್ಲರೂ ಸಪ್ತಋಷಿಗಳ ಮಾರ್ಗವನ್ನು ವಿಧಿನಿಯಮದಂತೆ ಆರಿಸಿಕೊಂಡಿದ್ದೇವೆ ಎಂದು ಅನಿಸುತ್ತದೆ. – ಫಿರೋಜಾ ಪಾಂಡೆ

ನಾನು ಹೆಚ್ಚಿನ ಅರಿವು, ಅಂತರ್–ಗ್ರಹಿಕೆ ಮತ್ತು ಅನುಕಂಪದಿಂದ ಕೂಡಿದ ವ್ಯಕ್ತಿಯಾಗಿದ್ದೇನೆ. ನಾನು ಈಗ ಶಾಂತತೆಯಿಂದಿರುತ್ತೇನೆ ಮತ್ತು ಕೆಲಸ ಮಾಡುವ ಮುನ್ನ ಆಲೋಚಿಸುತ್ತೇನೆ. ದೀನರಿಗೆ ಮತ್ತು ಕಷ್ಟದಲ್ಲಿರುವವರಿಗೆ ಬೆಳಕನ್ನು ಹರಡುತ್ತೇನೆ. ನೋವಿನಲ್ಲಿರುವವರಿಗೆ ಹೀಲಿಂಗ್ ಚೈತನ್ಯಗಳನ್ನು ಕಳುಹಿಸುತ್ತೇನೆ. ನಾನು ಯಾವುದಕ್ಕೂ ಚಿಂತಿಸುವುದಿಲ್ಲ ಮತ್ತು ನನ್ನ ಹಾದಿಯಲ್ಲಿ ಏನೇ ಬಂದರೂ ಅದು ದೇವರ ಇಚ್ಛೆ ಎಂದು ಒಪ್ಪಿಕೊಳ್ಳುತ್ತೇನೆ. – ಹಿಲ್ಡಾ ಮಚ್‌ದಾ

ಗುರೂಜಿ ಒಂದು ಬೆಳಕು. ಈ ಸಂಸ್ಥೆ ಬೆಳಕಿನ, ಬೆಳಕಿನಿಂದ ಮತ್ತು ಬೆಳಕಿಗಾಗಿ ಇರುವ ಸಂಸ್ಥೆ. ಇದು ಜಾತಿ, ಪಂಥ, ಧರ್ಮ, ವರ್ಣ ಮತ್ತು ಕುಲಗಳನ್ನು ಗಣನೆಗೆ ತೆಗೆದುಕೊಳ್ಳದೆ ಎಲ್ಲರಿಗೂ ಬೆಳಕನ್ನು ಹರಡುವ ಸಂಸ್ಥೆ. –ಮೀನಾ ಕುಂಬ್ಳೆ

ಒಮ್ಮೆ ನಾವು ಮುಂಬಯಿಗೆ ಹೋಗುವಾಗ, ಕಾರಿನಲ್ಲಿ ಬಿಟ್ಟಿದ್ದ ಸೆಲ್ ಫೋನ್ ಪುನಃ ಸಿಕ್ಕಿತು. ಮತ್ತೊಮ್ಮೆ ನಾವು ಮಳೆಯಲ್ಲಿ ಸಿಕ್ಕಿಹಾಕಿಕೊಂಡಾಗ, ಎಲ್ಲಿಂದಲೋ ಒಬ್ಬ ಅಪರಿಚಿತ ಕೊಡೆಯೊಂದಿಗೆ ಹಾಜರಾದ! ನನ್ನನ್ನು ಸದಾಕಾಲ ಗಮನಿಸುತ್ತಿರುವ ಮತ್ತು ನನಗೆ ಸಹಾಯ ಮಾಡುವ ಒಬ್ಬರು ಇದ್ದಾರೆಂದು ನಾನು ಯಾವಾಗಲೂ ಹೇಳುತ್ತಿರುತ್ತೇನೆ. ಇದಕ್ಕಾಗಿ ನಿಮಗೆ ಮತ್ತು ಋಷಿಗಳಿಗೆ ನನ್ನ ಕೃತಜ್ಞತೆಗಳು. – ಗೀತಾ ಜೋಶಿ

## ಪ್ರಶ್ನೆಗಳು ಮತ್ತು ಉತ್ತರಗಳು

(ಸಂಗ್ರಹ: ಶೋಭಾ ಕೆ. ರಾವ್; ಅನು: ಉಷಾ ವಾಸನ್)

**ಪ್ರ: ದೇವರು ಕೊಲ್ಲುವುದಕ್ಕೆ ಏಕೆ ಆಸ್ಪದ ನೀಡುತ್ತಾನೆ?**

ಉ: ದೇವರು ಕೊಲ್ಲುವುದಕ್ಕೆ ಆಸ್ಪದ ಕೊಡುವುದೂ ಇಲ್ಲ ಅಥವಾ ತಪ್ಪಿಸುವುದೂ ಇಲ್ಲ. ಆತ ಅದಕ್ಕೆ ಸಾಕ್ಷಿ ಮಾತ್ರ.

**ಪ್ರ: ಸೃಷ್ಟಿಯ ಜೊತೆಯಲ್ಲಿ ದೇವರೂ ವಿಕಾಸ ಹೊಂದುತ್ತಾನೆಯೇ?**

ಉ: ಸೃಷ್ಟಿಯಾದುದು ವಿಕಸನಗೊಳ್ಳುತ್ತದೆ. ದೇವರು ಸೃಷ್ಟಿಯಾದುದಲ್ಲ. ಅವನಿಗೆ ವಿಕಾಸದ ಅವಶ್ಯಕತೆಯಿಲ್ಲ. ಆತನ ಅಸ್ತಿತ್ವ ಯಾವಾಗಲೂ ಇರುತ್ತದೆ.

**ಪ್ರ: ನಾನು ಎಲ್ಲವನ್ನೂ ತ್ಯಜಿಸಿ ನಿಮ್ಮ ಕೆಲಸದಲ್ಲಿ ಭಾಗಿಯಾಗಬೇಕೆಂದಿದ್ದೇನೆ. ನಾನು ಸೇರಬಹುದೇ?**

ಉ: ಇದನ್ನು ಮೆಚ್ಚಲಾಗಿದೆ. ಆದರೆ ನೀವು ಕೆಲಸವನ್ನು ಅರ್ಥಮಾಡಿಕೊಳ್ಳಬೇಕು, ನಿಮ್ಮನ್ನು ನೀವು ಪ್ರೀತಿಯಿಂದ ಸಿದ್ಧಗೊಳಿಸಿಕೊಳ್ಳಬೇಕು. ನೀವು ಸರಿಯಾದ ಸಿದ್ಧತೆಯಿಲ್ಲದೆ ನಮ್ಮ ಕೆಲಸದಲ್ಲಿ ಭಾಗಿಯಾದರೆ, ನಿರಾಶೆಗೊಂಡು, ಹೊರಟು ಹೋಗುತ್ತೀರಿ.

**ಪ್ರ: ಹಲವು ಪ್ರಯತ್ನಗಳ ನಂತರವೂ ನನಗೆ ಋಷಿಗಳನ್ನು ಸಂಪರ್ಕಿಸಲು ಸಾಧ್ಯವಾಗಲಿಲ್ಲ. ದಯವಿಟ್ಟು ನಾನೇನು ಮಾಡಬೇಕೆಂದು ಸಲಹೆ ನೀಡಿ.**

ಉ: ನಾವು ಋಷಿಗಳೊಂದಿಗಿನ ಸಂಪರ್ಕವನ್ನು ಸಾವಿರಾರು ವರ್ಷಗಳ ಹಿಂದೆಯೇ ಕಳೆದುಕೊಂಡೆವು. ಅದನ್ನು ಪುನಃ ದೊರಕಿಸಿಕೊಳ್ಳಲು ಬಹಳ ಸಮಯ ತೆಗೆದುಕೊಳ್ಳುತ್ತದೆ. ಮೊದಲನೆ ಶಂಬಲ ತತ್ವವನ್ನು ಅಭ್ಯಸಿಸಿ. ಶಾಂತತೆ ಸಂಪರ್ಕಕ್ಕೆ ಸಹಾಯ ಮಾಡುತ್ತದೆ. ಉತ್ಕಟ ಪ್ರೀತಿಯಿಂದ ಋಷಿಗಳೊಂದಿಗೆ ಮಾತನಾಡಿ, ನಿಮಗೆ ಅವರು ಉತ್ತರಿಸುವುದು ಕೇಳಿಸುತ್ತದೆ. ನಿಮಗೆ ಸಂಪರ್ಕ ಸಿಗುತ್ತದೆ, ಪ್ರಯತ್ನವನ್ನು ನಿಲ್ಲಿಸಬೇಡಿ.

**ಪ್ರ: ನಾನು ಬೆಳಕನ್ನು ಅನುಭವಿಸುವುದು ಹೇಗೆ?**

ಉ: ನೀವಾಗಿಯೇ ಒಂದು ಮಾರ್ಗವನ್ನು ಕಂಡುಕೊಳ್ಳಬೇಕು. ಮೊದಲು, ನೀವು ಬೆಳಕು ಇದೆ ಎಂದು ನಂಬಬೇಕು, ಈ ಅಗೋಚರ ಬೆಳಕಿನ ಅರಿವನ್ನು ಅಥವಾ ಅದರ ಇರುವಿಕೆಯನ್ನು ನಿಮ್ಮಲ್ಲಿ ಹೊಂದಬೇಕು. ಅದಕ್ಕೆ ಪ್ರೀತಿಯನ್ನು ಕಳುಹಿಸಿ. ಬೆಳಕು ಪ್ರತಿಸ್ಪಂದಿಸುತ್ತದೆ. ಇದಕ್ಕಾಗಿ ನೀವು ಸ್ವಲ್ಪ ಸಮಯವನ್ನು ಕಳೆಯಬೇಕು. ಅದು ದೇವರೊಂದಿಗೆ ಪ್ರೀತಿಯಿಂದ ವ್ಯವಹರಿಸಿದಂತೆ. ನಾವು ಅವನನ್ನು ಪ್ರೀತಿಸಬೇಕು. ಆಗ ನಮಗೆ ಬೆಳಕಿನ ಅನುಭವವಾಗುತ್ತದೆ. ಈ ಬೆಳಕು ಅಗಾಧವಾದ ಪ್ರೀತಿಯನ್ನು ಹೊಂದಿದೆ.

**ಪ್ರ: ನನಗೆ ಧ್ಯಾನ ಮಾಡಲಾಗುತ್ತಿಲ್ಲ. ದಯವಿಟ್ಟು ಸಹಾಯ ಮಾಡಿ.**

ಉ: ಸಹಾಯದ ಆಶ್ವಾಸನೆ ಇದೆ, ಆದರೆ ಇನ್ನು ಹೆಚ್ಚು ಸ್ಪಷ್ಟವಾಗಿ ವಿಷಯ ತಿಳಿಸಿ ಸಹಾಯ ಮಾಡಿ. ನಾವು ಧ್ಯಾನದ ಬಗ್ಗೆ ನಿಜವಾಗಿ ಗಂಭೀರವಾಗಿದ್ದರೆ, ಧ್ಯಾನಕ್ಕೆ ನೈಜವಾಗಿ ತಡೆಯುಂಟುಮಾಡುವ ಅಂಶವನ್ನು ಗುರುತಿಸಿ, ಆ ಸಮಸ್ಯೆಯನ್ನು ಪರಿಹರಿಸಿಕೊಳ್ಳುತ್ತೇವೆ.

**ಪ್ರ: ಧ್ಯಾನವನ್ನು ಮೊದಲು ಯಾವಾಗ ಕಲಿಸಲಾಯಿತು? ಮತ್ತು ಧ್ಯಾನವನ್ನು ಯಾರು ಕಲಿಸಿದರು?**

ಉ: ಧ್ಯಾನವನ್ನು ಕೋಟ್ಯಂತರ ವರ್ಷಗಳ ಹಿಂದೆ ಸಪ್ತಋಷಿಗಳು ನಾವು ಈ ಭೂಮಿಗೆ ಬಂದಾಗ ಮೊದಲು ಕಲಿಸಿದರು.

**ಪ್ರ: ನಾವು ಏತಕ್ಕೆ ಧ್ಯಾನ ಮಾಡಬೇಕು?**

ಉ: ನಾವು ಧ್ಯಾನವನ್ನು ಹೆಚ್ಚಿನ ಏಕಾಗ್ರತೆಗೆ, ಸ್ಮರಣಶಕ್ತಿಗೆ, ಮನಃಶಾಂತಿಗೋಸ್ಕರ ಮಾಡಬೇಕು. ಹೊಸ ಚೈತನ್ಯಗಳನ್ನು ಪಡೆಯಲು, ಹೊಸ ಜಟಿಲ ಬದುಕಿನೊಂದಿಗೆ ವ್ಯವಹರಿಸಲು, ಅಗತ್ಯವಾದ ವಿವೇಕವನ್ನು ಪಡೆಯಲು ಧ್ಯಾನ ಮಾಡಬೇಕು. ನಾವು ಹೆಚ್ಚಿನ ಬೆಳಕನ್ನು ಪಡೆಯಲು, ಬೆಳಕಾಗಲು ಮತ್ತು ಬೆಳಕಿನ ದೇಹಗಳಾಗಲು ಧ್ಯಾನ ಮಾಡಬೇಕು. ನಮ್ಮ ಸ್ವಾಭಾವಿಕ ಶಕ್ತಿಗಳಾದ ಮೂರನೇ ಕಣ್ಣು, ಅಂತರ್‌ಗ್ರಹಣಶಕ್ತಿ ಮೊದಲಾದವುಗಳನ್ನು ಹರಿತಗೊಳಿಸಲು, ಋಷಿಗಳೊಂದಿಗೆ ಸಂಪರ್ಕ ಹೊಂದಲು ಮತ್ತು 2012ನ್ನು ಸಲೀಸಾಗಿ ದಾಟಲು ಧ್ಯಾನ ಮಾಡಬೇಕು.

**ಪ್ರ: ನೀವು ನಮಗೆ ಹಲವು ಹೀಲಿಂಗ್ ತಂತ್ರಗಳನ್ನು ಕೊಟ್ಟಿರುವಿರಿ. ನಾವು ಯಾವುದನ್ನು ಅನುಸರಿಸಬೇಕು?**

ಉ: ಇತ್ತೀಚಿನ ಅಥವಾ ಯಾವುದಾದರೂ ಒಂದನ್ನು ಅನುಸರಿಸಿ. ಹೀಲಿಂಗ್‌ನಲ್ಲಿ ಕೆಲಸ ಮಾಡುವುದು ಪ್ರೀತಿ ಮತ್ತು ಉದ್ದೇಶ, ತಂತ್ರಗಳಲ್ಲ ಎಂಬುದನ್ನು ನಾವು ತಿಳಿಯಬೇಕು.

**ಪ್ರ: ನಮಗೆ ಜ್ಞಾನೋದಯವಾದ ಮೇಲೂ ಗುರುವಿನ ಅವಶ್ಯಕತೆಯಿದೆಯೇ?**

ಉ: ನಮಗೆ ಜ್ಞಾನೋದಯವಾದ ಮೇಲೂ ದೇವರ ಮಾರ್ಗದರ್ಶನದ ಅಗತ್ಯ ಯಾವಾಗಲೂ ಇದೆ. ನಮಗೆ ನಿರಂತರ ಮಾರ್ಗದರ್ಶನದ ಅಗತ್ಯವಿದೆ. ■

## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| 2012 - End or Beginning | 100/- |
| iGuruji - Vol 1 | 150/- |
| iGuruji - Vol 2 | 120/- |
| iGuruji - Vol 3 | 150/- |
| Higher Communication & Other Realities | 100/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| The Masters Answer | 120/- |
| Channelled Knowledge from the Rishis | 250/- |
| Channelled Knowledge from the Rishis-Vol-2 | 150/- |
| Guruji Speaks Part - I | 200/- |
| Guruji Speaks Part - II | 200/- |
| Guruji Speaks Vol - 3 | 150/- |
| The Book of Reflections - Vol 1 | 200/- |
| The Book of Reflections - Vol 2 | 200/- |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| Light | 10/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| 2012 ಅಂತ್ಯ ಅಥವಾ ಆರಂಭ | 100/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ऋषींकडून मिळालेले ज्ञान (Marathi) | 200/- |
| प्रकाशवाट (Marathi) | 150/- |
| २०१२ – अंत की आरंभ? (Marathi) | 100/- |
| आय्गुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| தியானம் செய்வது எப்படி | 50/- |
| ஒளியின் வாயில்கள் | 200/- |
| 2012 முடிவா அல்லது தொடகமா | 100/- |
| ஒளியில் வாழ்க்கை | 10/- |
| ஒளி | 10/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| వెలుగులో జీవించడం | 10/- |
| కాంతి | 10/- |
| కాంతికి ద్వారములు | 150/- |

RNI. No. KARKAN/2003/13739 Registered Postal Regn. No. CPMG/KA/CNA-48/2009-11
Date of posting Newsletter-25th of Every Month. Posted at Bangalore GPO No. of Pages-8



ಗುರೂಜಿ ಕೃಷ್ಣಾನಂದ (1939)

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ಮಾನಸದಲ್ಲಿ ಋಷಿಗಳ ಮಾರ್ಗದರ್ಶನ ದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸ ಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('ಮಾನಸ ಫೌಂಡೇಶನ್'ನ ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80-G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಆಧ್ಯಾತ್ಮಿಕ ಅನುಭವಗಳು

(ಸಂಗ್ರಹ: ಶೋಭಾ ಕೆ. ರಾವ್; ಅನು: ಸ್ವರ್ಣಲತ)

7-9-2010ರಂದು ಧ್ಯಾನ ಆರಂಭಿಸಿದ ಕೆಲವೇ ನಿಮಿಷಗಳಲ್ಲಿ ನಾನು ಸಂಪೂರ್ಣ ಶೂನ್ಯತೆಯಲ್ಲಿದ್ದೆ. ಅಲ್ಲಿ ಗಾಢವಾದ ನಿಶ್ಶಬ್ದತೆ ಹಾಗೂ ಸ್ಥಿರತೆಯಿತ್ತು. ಈ ಅನುಭವದಲ್ಲಿ ಇನ್ನೂ ಆಳವಾಗಿ ಹೋಗು ಎಂಬ ಗುರೂಜಿಯವರ ಧ್ವನಿ ಕೇಳಿಸಿತು. ನಾನು ಆಳವಾಗಿ ಹೋದ ಹಾಗೇ ನನ್ನ ಕಣ್ಣುಗಳಲ್ಲಿ ಕಂಬನಿ ಸುರಿಯಿತು. ನನಗೆ ಅಲ್ಲಿದ್ದ ಪ್ರಶಾಂತತೆಯಿಂದ ಹೊರಬರಲು ಇಷ್ಟವಾಗದೆ, ನನಗೆ ಅಲ್ಲೇ ಇರಲು ಸಾಧ್ಯವಾಗುವಂತೆ ಅನುಗ್ರಹಿಸಲು ಗುರೂಜಿಯವರನ್ನು ಪ್ರಾರ್ಥಿಸಿದೆ. ಆಗ ಅವರು, ನಾನು ನನ್ನ ಅಪೂರ್ಣ ಕನಸುಗಳನ್ನು ಈಡೇರಿಸಲು ಈ ಸ್ಥಿತಿಯಿಂದ ಹೊರಬರಲೇಬೇಕೆಂದು ತಿಳಿಸಿದರು. ಗುರೂಜಿಯವರ ಆ ಕರುಣೆ ಮತ್ತು ಪ್ರೀತಿಗೆ ನನ್ನ ವಂದನೆಗಳು.

– ಪೂರ್ಣಿಮಾ ಪರುಲೇಕರ್

ನನಗೆ ತಿರುಪತಿಯ ಬೆಟ್ಟವನ್ನು ಹತ್ತುತ್ತಿದ್ದಾಗ, ವಿಪರೀತ ಆಯಾಸದಿಂದ ಉಸಿರಾಡಲು ಕಷ್ಟವಾಯಿತು. ನಾನು ಒಂದೆಡೆ ಕುಳಿತುಕೊಂಡು ಈ ಕಾರ್ಯವನ್ನು ಪೂರ್ಣಗೊಳಿಸಲು ಶಕ್ತಿಕೊಡು ಎಂದು ಬೆಳಕನ್ನು ಪ್ರಾರ್ಥಿಸಿದೆ. ಆಗ ನನ್ನ ಅಂತರಾಳದಿಂದ ಒಂದುದನಿ ನನ್ನೊಳಗೆ ಇನ್ನೂ ಹೆಚ್ಚಿನ ನೋವುಗಳು ತುಂಬಿದ್ದು, ಇವುಗಳನ್ನು ನಾನು ಅನುಭವಿಸಲೇಬೇಕು ಮತ್ತು ಕೇವಲ ಇಷ್ಟರಿಂದಲೇ ಎಲ್ಲ ಮುಗಿಯುತ್ತದೆ ಎಂದು ಹೇಳಿತು. ನಂತರ ನನ್ನ ದೇಹದಿಂದ ಏನೋ ಹೊರಹೋದಂತಾಯಿತು ಮತ್ತು ನನ್ನಲ್ಲಿ ಅಧಿಕ ಚೈತನ್ಯ ಉಕ್ಕಿ, ಮುಂದಿನ ಪ್ರಯಾಣ ಏನೂ ಬಳಲಿಕೆಯಿಲ್ಲದೆ ಅತ್ಯಂತ ಹರ್ಷದಾಯಕವಾಗಿತ್ತು.

– ನಿತ್ಯಾ ಜೇಮ್ಸ್

ಸೆಪ್ಟೆಂಬರ್ 19ರ 'ರಾ' ತರಗತಿಯಲ್ಲಿ ಮಹರ್ಷಿ ವಿಶ್ವಾಮಿತ್ರರೊಡನೆ ರಾ-ಬ್ರಹ್ಮ ಇದ್ದು, ನಮಗೆ ವಿಶೇಷ ಚೈತನ್ಯಗಳನ್ನು ನೀಡಿದರು. ರಾ-ಲೋಕದ ಒಬ್ಬ ಸ್ತ್ರೀ ಋಷಿಯು, ನಮ್ಮಲ್ಲಿರುವ ಎಲ್ಲಾ ಚೈತನ್ಯಗಳ ಸಮತೋಲನವನ್ನು ಕಾಪಾಡಿಕೊಂಡು, ಹೆಚ್ಚಿನ 'ರಾ' ಚೈತನ್ಯಗಳನ್ನು ಪಡೆದು, 2012ಕ್ಕೆ ಸಿದ್ಧತೆ ಮಾಡಿಕೊಳ್ಳಲು ಸಹಾಯವಾಗುವ ವಿಶೇಷವಾದ ಕೋಮಲ ಶಕ್ತಿಯನ್ನು ಹರಿಸಿದರು.

ರಾ-ಚೈತನ್ಯಗಳನ್ನು ಅವಶ್ಯಕತೆ ಇರುವೆಡೆಗೆ, ಎಲ್ಲರ ಉಪಯೋಗಕ್ಕಾಗಿ ಹರಡಲು ಒಂದು ನೀಲಿ ಬಣ್ಣದ ವಜ್ರಾಕಾರದ ಉಪಕರಣವನ್ನು ಭೂಮಿಗೆ ತಂದರು. ಈ ಚೈತನ್ಯಗಳು ನಮ್ಮಲ್ಲಾಗುವ ಬದಲಾವಣೆಗಳಿಗೆ ಹಾಗೂ 2012ರ ಸಿದ್ಧತೆಗೆ ಅತಿ ಅವಶ್ಯಕ.

–ವಿದ್ಯಾ ಅರೋರಾ

ಎರಡು ವಾರಗಳ ಹಿಂದೆ ನಾನು 'ರಾ' ಧ್ಯಾನ ಮಂದಿರದಲ್ಲಿ ಧ್ಯಾನ ಮಾಡುತ್ತಿದ್ದೆ. ಒಂದು ಗಂಟೆಯ ನಂತರ ನಾವು ಅಲ್ಲಿಂದ ಹೊರಡಬೇಕಾಗಿದ್ದರಿಂದ, ನನಗೆ ಸಿಕ್ಕ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಯೋಚಿಸಿದೆ. ನಂತರ ನಾನು ನೀಲಿಬೆಳಕಿನೊಡನೆ ಬೆರೆತು ವಿಸ್ತರಿಸಿದುದನ್ನು ಬಹಳ ಕಾಲ ಅನುಭವಿಸಿದೆ. ನನಗೆ ಅದೇ ಸ್ಥಿತಿಯಲ್ಲಿ ಬಹಳಷ್ಟು ಕಾಲ ಕಳೆದೆ ಎಂದೆನಿಸಿ, ಗಡಿಯಾರ ನೋಡಿದರೆ ಒಂದು ನಿಮಿಷವೂ ಕಳೆದಿರಲಿಲ್ಲ. ಅದನ್ನು ಕಂಡು ಆಶ್ಚರ್ಯವಾಯಿತು. ಆಗ ಕಾಲ ನಿಂತು ಹೋಗಿತ್ತು!

– ರೂಬಿ ಬಿಲಿಮೊರಿಯಾ

ಆಗಸ್ಟ್ 16ರಂದು ನಾನು ನನ್ನ ಆಫೀಸಿನಿಂದ ಹೊರಬಂದಾಗ, ಒಂದು ವಿದ್ಯುತ್ ಕಂಬದ ಕೆಳಗೆ ಕಾಗೆಯೊಂದು ಬಿದ್ದಿತ್ತು. ಅದಕ್ಕೆ ವಿದ್ಯುತ್ ಆಘಾತವಾಗಿ, ಉಸಿರಾಡಲು ಕಷ್ಟಪಡುತ್ತಿತ್ತು. ನಾನು ಬೆಳಕನ್ನು ಪ್ರಾರ್ಥಿಸಿ, ಆ ಕಾಗೆಗೆ ಬೆಳಕನ್ನು ಹರಿಸಿ ಅಲ್ಲಿಂದ ಮುಂದೆ ಸಾಗಿದೆ. ಅರ್ಧ ಗಂಟೆಯ ನಂತರ ಅದನ್ನು ನೋಡಲು ಬಂದಾಗ ಆ ಕಾಗೆ ಹಾರಿಹೋಗಿತ್ತು! ಬೆಳಕು ತನ್ನ ಕಾರ್ಯವನ್ನು ಮಾಡಿತ್ತು.

–ಕೆ. ರಾಮಚಂದ್ರ

ಸೆಪ್ಟೆಂಬರ್ 17ರ ಬೆಳಿಗ್ಗೆ ಬೆಳಕನ್ನು ಆಳವಾಗಿ ಅನುಭವಿಸುತ್ತಿದ್ದಾಗ, ನನಗೊಂದು ಸುಂದರ ದೃಶ್ಯ ಕಾಣಿಸಿತು. ಬೆಳಕು ನನ್ನ ಮೇಲೆಲ್ಲಾ ಹರಿಯುತ್ತಿತ್ತು ಮತ್ತು ಅದನ್ನು ನಾನು ಹರ್ಷಭರಿತಳಾಗಿ ಅನುಭವಿಸುತ್ತಿದ್ದೆ. ತಕ್ಷಣ ಆ ಬೆಳಕು ಹೆಚ್ಚಿನ ಹೊಳಪನ್ನು ಪಡೆಯಿತು. ಆ ಕ್ಷಣದಲ್ಲಿ ಬೆಳಕಿನ ತೀವ್ರತೆಯಿಂದಾಗಿ ಬೇರೇನೂ ಕಾಣದಾಯಿತು. ಬೆಳಕು ಎಲ್ಲವನ್ನೂ ಆಕ್ರಮಿಸಿತ್ತು. ಅದೊಂದು ಅತ್ಯುನ್ನತ ಅನುಭವ.

–ವಿದ್ಯಾ ವಿಶ್ವಾಮಿತ್ರ

ನನಗೆ ಯಾವಾಗಲೂ ನನ್ನ ಸುತ್ತ ಬೆಳಕು ತುಂಬಿರುವ ಅನುಭವವಾಗುತ್ತದೆ. ಆ ಬೆಳಕು ನನ್ನಲ್ಲಿನ ನಕಾರಾತ್ಮಕ ಗುಣಗಳನ್ನು ಸಕಾರಾತ್ಮಕವಾಗಿ ಬದಲಾಯಿಸುತ್ತದೆ. ನಾನೀಗ ಸಂತೋಷದಿಂದಿದ್ದೇನೆ. ಕೆಲವೊಮ್ಮೆ ಧ್ಯಾನದಲ್ಲಿ ನಾನು ಬೆಳಕಿನ ದೇಹವಾಗಿರುವುದನ್ನು ನೋಡುತ್ತೇನೆ.

–ಅರ್ಚನಾ ಪಿಳ್ಳೈ

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.200/-
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು - 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ